ಶ್ರೀ ಗೌಡಪಾದಾಚಾರ್ಯ ವಿರಚಿತ

ಉತ್ತರಗೀತಾ ಭಾಷ್ಯ



ॐ

॥ ಶ್ರೀಮನ್ನಾರಾಯಣಾಯ ನಮಃ ॥

॥ ಶ್ರೀ ಗುರುಭ್ಯೋ ನಮಃ ॥

ಉತ್ತರಗೀತಾ ಪ್ರವಚನ

ಶ್ರೀ ಗೌಡಪಾದೀಯ ವ್ಯಾಖ್ಯಾನದ ಕನ್ನಡ ಅನುವಾದ

ಅನುವಾದಕರು:

ಮಹಾಮಹೋಪಾಧ್ಯಾಯ
ವಿದ್ವಾನ್ ಎನ್. ರಂಗನಾಥ ಶರ್ಮಾ

ಗ್ರಂಥ ಸಂಗ್ರಾಹಕರು –

ಯು. ಹರೀಶ ಪಿ. ಶೆಣೈ

॥ ಶ್ರೀ ಕೃಷ್ಣಾರ್ಪಣಮಸ್ತು ॥

ಪುಟಗಳು : 18 + 42

ಪುಸ್ತಕ ಬಿಡುಗಡೆ : ಸನ್ಮಾನ್ಯ ಡಾ। ವಿ. ಎಸ್. ಆಚಾರ್ಯ,
ಗೃಹ ಮಂತ್ರಿ, ಕರ್ನಾಟಕ

ಮುಖಪುಟ : ಮಾಸ್ಟರ್ ಯು. ಪಾಂಡುರಂಗ ಹರೀಶ ಶೆಣೈ

ವಿನ್ಯಾಸ : ಶ್ರೀ ಬಿಳಗಿ ರಾಮಚಂದ್ರ ಭಟ್, ಉಡುಪಿ

ಮುದ್ರಕರು : ಮಣಿಪಾಲ ಪ್ರೆಸ್ ಲಿಮಿಟೆಡ್, ಮಣಿಪಾಲ

ಅನುವಾದಕರು : ವಿದ್ವಾನ್ ಎನ್. ರಂಗನಾಥ ಶರ್ಮಾ
1261, ''ಧರಣಿ'',
13ನೇ ಕ್ರಾಸ್, 2ನೇ ಹಂತ ಗಿರಿನಗರ
ಬೆಂಗಳೂರು – 85

ಪ್ರಕಾಶಕರು : ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್ (R)
ಒಂದನೇ ಮಹಡಿ, ''ವಾಸುದೇವ ಸದನ''
ಶ್ರೀ ವೆಂಕಟರಮಣ ದೇವಸ್ಥಾನ ರಸ್ತೆ
ತೆಂಕಪೇಟೆ, ಉಡುಪಿ – 576 101
ಫೋನ್: (0820) 2520815



ಶ್ರೀ ಯು. ವಾಸುದೇವ ಜೋಗಪ್ಪ ಶೆಣ್ಯೆಯವರ ಮನೆತನದ
ಪ್ರಧಾನ ದೇವರಾದ ಶ್ರೀ ವಿಠಲ ರುಖುಮಾಯಿ ದೇವರು



18-3-1892 5-3-1960
ದಿ। ಯು. ವಾಸುದೇವ ಜೋಗಪ್ಪ ಶೆಣೈ

17-4-1896 21-12-1976
ದಿ। ಯು. ಪುಂಡಲೀಕ ಜೋಗಪ್ಪ ಶೆಣೈ

2-8-1928 10-2-1994
ದಿ। ಯು. ಪಾಂಡುರಂಗ ವಿ. ಶೆಣೈ
ಸಂಸ್ಥಾಪಕರು
ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್

H.H. SHRIMAD SUDHINDRA THIRTHA SWAMI

SHREE KASHI MATH SAMSTHAN, VARANASI

Camp
Sri Kashi Math
Manjeswar

Ref.

Date 13.12.08

Hearty Blessings
to the Book - Translation in Kannada
of Uthara Geetha Bhashya By
memorial
Sri U. Pundalik Shenoy Trust
Udupi, in the name of Sri Narayana,
many good men desirous
of getting information of the
vedic philosophy, be bene-
fitted by reading this Book is
prayed at the Lotus feet of Sri
Vyasa Raghupathi. with Hearty
Blessings.
Sd/-

-2

श्री श्री जगद्गुरु शङ्कराचार्य महासंस्थानम्,
दक्षिणाम्नाय श्री शारदापीठम्, शृङ्गेरी
Sri Sri Jagadguru Shankaracharya Mahasamstanam
Dakshinamnaya Sri Sharada Peetham, Sringeri - 577 139

Ref S-18/8305 Camp SRINGERI Date

ಶೃಂಗೇರಿ 9-1-2009

ಉತ್ತರಗೀತೆ ಎಂಬ ಕಿರುಹೊತ್ತಿಗೆ ವೇದಾಂತತತ್ತ್ವಪ್ರತಿಪಾದಕವೆಂದು ಪ್ರಸಿದ್ಧವಾಗಿದೆ. ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ಶ್ರೀಮದ್ಭಗವದ್ಗೀತೆಯಲ್ಲಿ ವೇದಾಂತತತ್ತ್ವವನ್ನು ಬಹುವಿಸ್ತಾರವಾಗಿ ಬೋಧಿಸಿದರೂ ಕಾಲಕ್ರಮದಲ್ಲಿ ಅರ್ಜುನನು ಅದನ್ನು ಮರೆತು ಪುನಃ ಶ್ರೀಕೃಷ್ಣನನ್ನು ತತ್ತ್ವೋಪದೇಶಕ್ಕಾಗಿ ಪ್ರಾರ್ಥಿಸಲಾಗಿ ಈ ಉತ್ತರಗೀತೆಯನ್ನು ಭಗವಂತನು ಉಪದೇಶಿಸಿದನೆಂದೂ ಅದಕ್ಕಾಗಿಯೇ ಇದಕ್ಕೆ ಉತ್ತರಗೀತೆ ಎಂಬ ಹೆಸರು ಬಂದಿದೆ ಎಂದೂ ಪ್ರಾಚೀನ ಪರಂಪರೆಯಿಂದ ತಿಳಿದುಬರುತ್ತದೆ. ಇದರಲ್ಲಿ ಮೂರು ಅಧ್ಯಾಯಗಳಿವೆ. ಇದಕ್ಕೆ ಗೌಡಪಾದಾಚಾರ್ಯವಿರಚಿತವಾದ ವ್ಯಾಖ್ಯಾನವು ಸುಮಾರು 100ವರ್ಷಗಳಹಿಂದೆ ವಾಣೀವಿಲಾಸ ಪ್ರೆಸ್ಸಿನಲ್ಲಿ ಮುದ್ರಿತವಾಗಿತ್ತು. ಇದು ವೇದಾಂತಜಿಜ್ಞಾಸುಗಳಿಗೆ ಉಪಾದೇಯವಾಗಿದೆ. ಇದನ್ನು ಕನ್ನಡಾನುವಾದಸಹಿತವಾಗಿ ಶ್ರೀಯುತ ಹರೀಶ್ ಶೆಣೈಯವರು ಪ್ರಕಟಿಸುತ್ತಿರುವುದು ಸಂತಸದವಿಷಯವಾಗಿದೆ. ಅನುವಾದದಲ್ಲಿ ಸಿದ್ಧಹಸ್ತರಾದ ವಿದ್ವಾನ್ ರಂಗನಾಥಶರ್ಮರು ಈ ಅನುವಾದವನ್ನು ಮಾಡಿ ಕನ್ನಡ ಜನತೆಗೆ ಉಪಕಾರವನ್ನು ಮಾಡಿದ್ದಾರೆ. ಈ ಗ್ರಂಥವನ್ನು ಅವಲೋಕಿಸಿ ಶ್ರೀಶ್ರೀಜಗದ್ಗುರುಮಹಾಸ್ವಾಮಿಗಳವರು ಸಂತೋಷಪಟ್ಟಿದ್ದಾರೆ.

ಶ್ರೀಶಾರದಾಚಂದ್ರಮೌಳೀಶ್ವರಕೃಪೆಯಿಂದ ಅನುವಾದಕರೂ ಪ್ರಕಾಶಕರೂ ಶ್ರೇಯೋಭಾಜನರಾಗಲಿ ಎಂದು ಶ್ರೀಗಳವರು ಆಶೀರ್ವದಿಸಿದ್ದಾರೆ.

ಇಂತು

[signature]

Phone 08265-250123 / 250192 Fax 08265-250792
E-mail info@sringerisharadapeetham.org Visit us www.sringerisharadapeetham.org

|| Shree Bhavanishankar Prasanna ||

Shree Saunsthan Gaudpadacharya Kavle Math

Shree Kavle Math, Kavale, Ponda, GOA - 403 401

Tel 0832- 2312049

ಆಸ್ಮದತ್ಯಂತ ಪ್ರೇಮಾಸ್ಪದೀಭೂತ ಶಿಷ್ಯವರ್ಯ ಮಾ॥ ರಾ॥ ಶ್ರೀ ಯು. ಹರೀಶ ಪಾಂಡುರಂಗ ಶೆಣೈ ಮೇನೇಜಿಂಗ್ ಟ್ರಸ್ಟೀ ಶ್ರೀಯು.ಪುಂಡಲೀಕ ಶೆಣೈ ಮೆಮೊರಿಯಲ್ ಟ್ರಸ್ಟ್, ಉಡುಪಿ ಇವಂಗೆ – ಶ್ರೀ ಮನ್ನಾರಾಯಣ ಸ್ಮರಣ ಪೂರ್ವಕ ಶುಭಾಶೀರ್ವಾದ ಪೂರ್ವಕ

<u>ಸಂದೇಶ</u>

ಪೂಜ್ಯಪಾದ ಗೌಡಪಾದಾಚಾರ್ಯರು ರಚಿಸಿದ " ಉತ್ತರ ಗೀತಾ" ಭಾಷ್ಯವನ್ನು ತಾವು ಮುದ್ರಿಸಿ ಪ್ರಕಾಶನಗೊಳಿಸುತ್ತಿರುವ ವಿಷಯ ತಿಳಿದು ಸಂತೋಷವಾಯಿತು. ಉತ್ತರಗೀತಾಭಾಷ್ಯದಲ್ಲಿ ಪೂಜ್ಯ ಪಾದರು ಧ್ಯಾನದಿಂದ ಮನಸ್ಸು ಏಕಾಗ್ರಗೊಂಡು ಇಂದ್ರಿಯನಿಗ್ರಹವಾಗುವುದರ ಬಗ್ಗೆ ವಿಶದೀಕರಿಸಿರುತ್ತಾರೆ.

ನಿಮ್ಮ ಸತ್ಕಾರ್ಯವು ಯಶಸ್ವಿಯಾಗಲೆಂದು ಶ್ರೀ ಭವಾನೀಶಂಕರ ಸನ್ನಿಧಿ ಯಲ್ಲಿ ಪ್ರಾರ್ಥಿಸಿ ಶುಭಾಶೀರ್ವಾದಗಳು.

ಶ್ರೀಮತ್ ಶಿವಾನಂದಸರಸ್ವತೀ ಸ್ವಾಮೀಜಿ

H. H. SHRI MAT SHIVANANDA SARASWATI
SWAMIJI, KAVALE MATH

ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ, ಶೃಂಗೇರಿಯ ಪೀಠಾಧಿಪತಿಗಳಾದ ಶ್ರೀ ಭಾರತೀತೀರ್ಥ ಸ್ವಾಮೀಜಿಯವರು ಶ್ರೀ ಗೌಡಪಾದಾಚಾರ್ಯ ವಿರಚಿತ ''ಸುಭಗೋದಯ ಸ್ತೋತ್ರಮ್' ಎಂಬ ಗ್ರಂಥವನ್ನು ಬಿಡುಗಡೆಗೊಳಿಸಿದರು.

श्री भगवद्गौडपादाचार्य विरचितम्
उत्तरगीता भाष्यम्
निवेदना

ತತ್ತದೃಕ್ಷಜ್ಞಾನ ಪಾಥೋಧಿಯುಷ್ಮತ್
ಪಾದದ್ವಂದ್ವಂ ಪದ್ಮಸೌಹಾರ್ದ ಹೃದ್ಯಮ್ ।
ದೈವಾದೇತದ್ದೀನ ದೃಗ್ಗೋಚರಶ್ಚೇತ್
ಭಕ್ತಸ್ಯೈತದ್ಭಾಗಧೇಯಂ ಹ್ಯಮೇಯಮ್ ॥
ಶ್ರೀ ಮಾಧವೀಯ ಶಂಕರ ದಿಗ್ವಿಜಯಃ ॥ ೧೬ - ೪೭ ॥

ಶ್ರೀ ಶಂಕರಾಚಾರ್ಯರು ತಮ್ಮ ಪರಮಗುರುಗಳಾದ ಶ್ರೀ ಗೌಡ ಪಾದಾಚಾರ್ಯರನ್ನು ಸ್ತುತಿಸುವಾಗ ''ಹೇ ಶುಕಮಹರ್ಷಿಯ ಸಾಕ್ಷಾತ್ ಶಿಷ್ಯರಾದ ಜ್ಞಾನಸಾಗರಮೂರ್ತಿಯು ತಾವು. ಪದ್ಮದಂತ ನಿಶ್ಕಲ್ಮಷ ಹೃದಯವುಳ್ಳ ತಮ್ಮ ಈ ಎರಡು ಪಾದಗಳು ನಮ್ಮಂತಹವರಿಗೆ ಅದೃಷ್ಟವಶದಿಂದಲೇ ಕಾಣಿಸಿಕೊಳ್ಳುವುದು. ಪರಿಶುದ್ಧ ಭಕ್ತನ ಭಾಗ್ಯವೇ ಆಗಿದೆ'' ಎನ್ನುತ್ತಾರೆ.

******

ಗ್ರಂಥ ಸಂಗ್ರಹ:

ನಾನು ಶ್ರೀ ಗೌಡಪಾದಾಚಾರ್ಯರ ಜೀವನ ಚರಿತ್ರೆ, ಹಾಗೂ ಅವರು ರಚಿಸಿರುವ ಗ್ರಂಥಗಳ ಸಂಶೋಧನೆಗೆ ಪ್ರಯತ್ನಿಸುತ್ತಿರುವಾಗ, ನಾನು ಒಮ್ಮೆ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶಂಕರ ಪೀಠ, ಶೃಂಗೇರಿಯ ಪೀಠಾಧೀಶರಾದ ಶ್ರೀ ಶ್ರೀ ಭಾರತಿ ತೀರ್ಥ ಸ್ವಾಮೀಜಿಯವರನ್ನು ವಿನಂತಿಸಿಕೊಂಡಾಗ ಅವರು ತಮ್ಮ ಬಳಿಯಿರುವ ಶ್ರೀ ಗೌಡಪಾದಾಚಾರ್ಯ ವಿರಚಿತ 'ಉತ್ತರಗೀತಾ ಭಾಷ್ಯ'ವನ್ನು ನನಗೆ ನೀಡಿದರು.

ಸಂಸ್ಕೃತ ಶ್ಲೋಕಗಳಿಂದ ಕೂಡಿದ ಈ ಗ್ರಂಥವನ್ನು ಕನ್ನಡದಲ್ಲಿ ಅನುವಾದ ಮಾಡಿಕೊಡುವಂತೆ ಬೆಂಗಳೂರು ನಿವಾಸಿ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ವಿದ್ವಾನ್ ಎನ್. ರಂಗನಾಥ ಶರ್ಮಾರವರಲ್ಲಿ ನಾನು ವಿನಂತಿಸಿಕೊಂಡಾಗ ಅವರು ಸಂತೋಷದಿಂದ ಒಪ್ಪಿಕೊಂಡರು. ಕೇವಲ ಒಂದೆರಡು ತಿಂಗಳಲ್ಲಿ ಕನ್ನಡ ಅನುವಾದ ಮಾಡಿ ನನಗೆ ಕಳುಹಿಸಿಕೊಟ್ಟರು.

ತನಗಾಗಿ ಏನನ್ನೂ ಬಯಸದೇ 96 ವರ್ಷ ವಯಸ್ಸಿನಲ್ಲಿಯೂ ದೃಷ್ಟಿದೋಷ ವಿದ್ದರೂ, ಅವರ ಆ ಸ್ಫೂರ್ತಿ, ಧರ್ಮ ಪ್ರಚಾರದ ಆಸಕ್ತಿ, ನಿಸ್ವಾರ್ಥ ಸಮಾಜ ಸೇವೆಗೆ ನಾನು ತಲೆಬಾಗುತ್ತೇನೆ.

ವಿದ್ವಾನ್ ಎನ್. ರಂಗನಾಥ ಶರ್ಮಾರವರು ಹೇಳಿದಂತೆ ಬರೆದು ಅವರಿಗೆ ಸಹಾಯ ಮಾಡಿದ ಶ್ರೀ ಯಲ್ಲಾಪುರ ಕೃಷ್ಣ ಶರ್ಮಾರವರಿಗೆ ನಾನು ಧನ್ಯವಾದವನ್ನು ಅರ್ಪಿಸುತ್ತೇನೆ.

'ಉತ್ತರಗೀತೆ': –

ಮಹಾಭಾರತದಲ್ಲಿ ಮಹಾಯುದ್ಧದ ಬಳಿಕ ಅರ್ಜುನನು ಒಮ್ಮೆ ಧ್ಯಾನಕ್ಕೆ ಕುಳಿತಿದ್ದಾಗ ತನ್ನ ಮನಸ್ಸು ಧ್ಯಾನದಲ್ಲಿ ಲೀನವಾಗದೇ ಚಂಚಲವಾಗಿ ಅಲೆದಾಡುತ್ತಿರುವಾಗ ಅರ್ಜುನನಿಗೆ ಶ್ರೀಕೃಷ್ಣನು ಮಹಾಯುದ್ಧದ ಪೂರ್ವ ಉಪದೇಶಿಸಿದ್ದ 'ಭಗವದ್ಗೀತೆ'ಯನ್ನು ಮರೆತು ಹೋಗಿರುವುದರಿಂದ ಚಿಂತೆಗೊಳಗಾದನು.

ಅರ್ಜುನನು ಶ್ರೀಕೃಷ್ಣನಲ್ಲಿ ತನ್ನ ಮನಸ್ಸು ಧ್ಯಾನದಲ್ಲಿ ಲೀನವಾಗುವಂತೆ ಉಪದೇಶಿಸಬೇಕೆಂದು ಕೇಳಿಕೊಂಡನು. ಶ್ರೀಕೃಷ್ಣಾರ್ಜುನರ ಆ ಸಂವಾದವನ್ನು ''ಉತ್ತರಗೀತಾ' ಎಂದು ಕರೆಯುತ್ತಾರೆ.

ಶ್ರೀ ಗೌಡಪಾದರ ಭಾಷ್ಯ: –

ಶ್ರೀಕೃಷ್ಣಾರ್ಜುನರ ಸಂವಾದವನ್ನು ಧ್ಯಾನಾಸಕ್ತರಾದ ಆಧ್ಯಾತ್ಮ ಸಾಧಕರಿಗೆ ಸುಲಭವಾಗಿ ಅರ್ಥವಾಗುವಂತೆ ವಿವರವಾಗಿ ಶ್ರೀ ಗೌಡಪಾದಾಚಾರ್ಯರು ತಮ್ಮ ಭಾಷ್ಯದಲ್ಲಿ ವರ್ಣಿಸಿದ್ದಾರೆ. ಇದನ್ನು ''ಉತ್ತರಗೀತಾ ಭಾಷ್ಯ'' ಎಂದು ಕರೆಯುತ್ತಾರೆ.

******

ಉತ್ತರಾಂಚಲದ ಹೃಷಿಕೇಶದ ಕೈಲಾಸಾಶ್ರಮದ ಯತಿಗಳಾದ ಶ್ರೀ ಶಿವಾನಂದಗಿರಿಯವರು ನನಗೆ ಒಂದು ಗ್ರಂಥವನ್ನು ನೀಡಿದ್ದಾರೆ. ಆ ಗ್ರಂಥವು ಹರಿದ್ವಾರದಲ್ಲಿ ನಡೆದ ಮಹಾಕುಂಭಮೇಳದ ಸಮಯದಲ್ಲಿ ಬಿಡುಗಡೆಯಾದ ಗ್ರಂಥವಾಗಿದೆ. ಆ ಗ್ರಂಥದ ಹೆಸರು –

दशनाम नागा संन्यासी
एवं
श्री पंचायती अखाड़ा महानिर्वाणी

ಶ್ರೀ ಜಗದ್ಗುರು ಶಂಕರಾಚಾರ್ಯರು ರಚಿಸಿದ ದಶನಾಮಗಳಾದ ಗಿರಿ, ಪರ್ವತ, ಸಾಗರ, ತೀರ್ಥ, ಆಶ್ರಮ, ಭಾರತೀ, ಪುರಿ, ಸರಸ್ವತಿ, ವನ ಹಾಗೂ ಅರಣ್ಯ. ಸಂನ್ಯಾಸಿಗಳು ತಮ್ಮ ಗುರುಗಳಿಂದ ನಾಮಕರಣಗೊಂಡ ದಿವ್ಯ ನಾಮಗಳೊಂದಿಗೆ ಆಯಾಯ ಅನುಯಾಯಿಗಳು ಬಳಸುವ ನಾಮಗಳು ಅತ್ಯಂತ ಸುಂದರ ಗ್ರಂಥ.

ಆ ಗ್ರಂಥದಲ್ಲಿ ಅನೇಕ ಕಡೆ ಶ್ರೀ ಗೌಡಪಾದಾಚಾರ್ಯರ ಜೀವನ ಚರಿತ್ರೆ ಹಾಗೂ ಅವರು ರಚಿಸಿರುವ ಅನೇಕ ಗ್ರಂಥಗಳ ಉಲ್ಲೇಖಗಳಿವೆ.

ಶ್ರೀ ಶಿವಾನಂದ ಗಿರಿಯವರು ಆ ಗ್ರಂಥವನ್ನು ನನಗೆ ನೀಡಿ, ಅವರಿಂದ ನಾನು ಅನುಗ್ರಹಿತವಾಗಿರುವುದನ್ನು ಧನ್ಯತಾಭಾವದಿಂದ ಇಲ್ಲಿ ಸ್ಮರಿಸುತ್ತೇನೆ.

ಶ್ರೀ ರಾಮಕೃಷ್ಣ ಆಶ್ರಮ, ಮೈಸೂರಿನ ಗ್ರಂಥಾಲಯದಲ್ಲಿ ಹಲವು ಗ್ರಂಥಗಳಲ್ಲಿ ಶ್ರೀ ಗೌಡಪಾದಾಚಾರ್ಯರು ರಚಿಸಿದ ಅನೇಕ ಗ್ರಂಥಗಳ ಉಲ್ಲೇಖಗಳಿವೆ.

ಇನ್ನೂ ಹಲವು ಗ್ರಂಥಾಲಯಗಳಲ್ಲಿ ಹಲವು ಗ್ರಂಥಗಳಲ್ಲಿ ಶ್ರೀ ಗೌಡ ಪಾದಾಚಾರ್ಯರು ರಚಿಸಿದ ಗ್ರಂಥಗಳ ಉಲ್ಲೇಖಗಳಿವೆ.

ಒಂದೊಂದಾಗಿ ಸಂಗ್ರಹಿಸುತ್ತಾ ಮರುಮುದ್ರಣ ಮಾಡಿ ಆಧ್ಯಾತ್ಮ ಸಾಧಕರಿಗೆ ನೀಡುವುದು ನನ್ನ ನಿಸ್ವಾರ್ಥ ಸಮಾಜ ಸೇವೆ ಎಂದು ಭಾವಿಸುತ್ತೇನೆ.

ನಿಮಗೂ ಶ್ರೀ ಗೌಡಪಾದಾಚಾರ್ಯರ ಜೀವನ ಚರಿತ್ರೆ ಹಾಗೂ ಅವರು ರಚಿಸಿರುವ ಗ್ರಂಥಗಳು ಸಿಕ್ಕಿದರೆ, ಅದರ Xerox ಪ್ರತಿಯನ್ನು ನನಗೆ ಕಳುಹಿಸಿದಲ್ಲಿ ಅದನ್ನು ಮರುಮುದ್ರಣ ಮಾಡುತ್ತೇನೆ.

'ಸರ್ವೇ ಜನಾಃ ಸುಖಿನೋ ಭವಂತು'. ಭಗವಂತನು ಎಲ್ಲರಿಗೂ ಒಳ್ಳೆಯದನ್ನೇ ಮಾಡಲಿ, ಎಲ್ಲರೂ ಸುಖವಾಗಿ ಬಾಳಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವ,

ಯು. ಹರೀಶ ಪಿ. ಶೆಣೈ

3-11-2008 *(ಆಡಳಿತ ಮೊಕ್ತೇಸರರು)*

ಉಡುಪಿ *ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್*



ಶ್ರೀ ಪುಂಡಲೀಕ ಶೆಣ್ಯೆ ಮೆಮೋರಿಯಲ್ ಟ್ರಸ್ಟ್‌ನ ವಾರ್ಷಿಕೋತ್ಸವ ಡಾ। ವಿ. ಎಸ್. ಆಚಾರ್ಯ, ಡಾ। ಕೆ. ಮೋಹನದಾಸ್ ಪೈ,
ಡಾ। ಟಿ. ರಾಮದಾಸ ಎಂ. ಪೈ ಹಾಗೂ ಯು. ಹರೀಶ ಪಿ. ಶೆಣ್ಯೆ

ಪ್ರಸ್ತಾವನೆ

ನಮ್ಮ ವೈದಿಕ ದರ್ಶನಗಳಲ್ಲಿ ವೇದಾಂತ ದರ್ಶನವು ತುಂಬ ಪ್ರಸಿದ್ಧವಾಗಿದೆ. ವೈಶೇಷಿಕಾದಿ ದರ್ಶನಗಳು ವೇದದ ಪ್ರಾಮಾಣ್ಯವನ್ನು ಅಂಗೀಕರಿಸಿದ್ದರೂ ಅವೆಲ್ಲವೂ ವಾದಗಳ ರೂಪದಲ್ಲಿ ಇವೆಯೇ ಹೊರತು ಆಚರಣೆಯ ಸ್ವರೂಪಕ್ಕೆ ತಿರುಗಲಿಲ್ಲ. ನಮ್ಮವರ ಆಚರಣೆಗಳು ಧರ್ಮಶಾಸ್ತ್ರ ಮತ್ತು ಪುರಾಣಗಳ ಹೇಳಿಕೆಗಳನ್ನು ಮಾತ್ರ ಅವಲಂಬಿಸಿಕೊಂಡಿವೆ. ಅವುಗಳಲ್ಲಿ ವೈಶೇಷಿಕಾದಿ ದರ್ಶನಗಳ ಪ್ರತಿಪಾದನೆಯು ಕಂಡುಬರುವುದಿಲ್ಲ. ಏನಿದ್ದರೂ ವೇದಾಂತವನ್ನೇ ಅವು ಪುರಸ್ಕರಿಸುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಇತರ ದರ್ಶನಗಳು ಮೋಕ್ಷವೇ ಮನುಷ್ಯರ ಪರಮಧ್ಯೇಯವೆಂದೂ ಪರಮಪುರುಷಾರ್ಥವೆಂದೂ ಅಂಗೀಕರಿಸಿದ್ದರೂ ಮೋಕ್ಷದ ಸಾಧನೆಗೆ ಬೇಕಾದ ಮಾರ್ಗಗಳನ್ನು ತೋರಿಸಿಕೊಟ್ಟಿಲ್ಲ. ಕರ್ಮ, ಭಕ್ತಿ, ಯೋಗ – ಇವು ಮೋಕ್ಷಸಾಧನೆಗಳೆಂದು ವೇದಾಂತದ ಪ್ರತಿಪಾದನೆಯಾಗಿರುತ್ತದೆ. ಈ ಮಾರ್ಗಗಳ ಪ್ರಸ್ತಾವನೆಯನ್ನು ಉಳಿದ ಶಾಸ್ತ್ರಗಳು ಪ್ರತಿಪಾದಿಸದೆ ಕೇವಲ ಲೌಕಿಕ ಪದಾರ್ಥಗಳ ವಿಚಾರವನ್ನೇ ಮಂಡಿಸಿ ಅವುಗಳ ಸಂಬಂಧವಾದ ವಾದದಲ್ಲಿಯೇ ಮುಳುಗಿ ಹೋಗಿರುವುದರಿಂದ ಸಾಮಾನ್ಯ ಜನತೆಗೆ ಅದರ ಆಕರ್ಷಣೆ ಉಂಟಾಗಲಿಲ್ಲ. ಉದಾಹರಣೆಗೆ ''ಸಾಂಖ್ಯದರ್ಶನ''ದಲ್ಲಿ ಪ್ರಕೃತಿ-ಪುರುಷರ ವಿವೇಕವೇ ಮೋಕ್ಷಕ್ಕೆ ಕಾರಣ ಎಂದು ಹೇಳಿ ಪ್ರಕೃತಿ ವಾದವನ್ನೇ ವಿಸ್ತರಿಸಲಾಗಿದೆ. ಯೋಗಶಾಸ್ತ್ರದಲ್ಲಿ ಧ್ಯಾನಯೋಗವನ್ನು ಮುಖ್ಯವಾಗಿ ಹೇಳಿ ಕೈಬಿಡಲಾಗಿದೆ, ವೈಶೇಷಿಕ ನೈಯಾಯಿಕರಂತೂ ಒಂದೆರಡು ಮಾತುಗಳಲ್ಲಿ ಮೋಕ್ಷ ಸ್ವರೂಪವನ್ನು ತಿಳಿಸಿ ನಾವು ಧನ್ಯರಾದೆವೆಂದು ಸಾಧನ ಮಾರ್ಗವನ್ನು ಹೇಳದೆ ಕೈ ಬಿಡುತ್ತಾರೆ. ಪೂರ್ವ ಮೀಮಾಂಸಕರು ಸ್ವಲ್ಪ ಮಟ್ಟಿಗೆ ಕರ್ಮ ಮಾರ್ಗವನ್ನು ತಿಳಿಸಿದರೂ ಅದು ಕಾಮ್ಯ ಕರ್ಮವೇ ಹೊರತು ನಿಷ್ಕಾಮ ಕರ್ಮವಲ್ಲ. ವೈದಿಕ ಕರ್ಮದ ಫಲ ಸ್ವರ್ಗಾದಿ ಭೋಗ ಸಾಮಗ್ರಿಯೇ ಹೊರತು ಸಂಸಾರದ ಬಿಡುಗಡೆಯಲ್ಲ. ಅಲ್ಲದೆ ಭಕ್ತಿಗೆ ವಿಶೇಷ ಸ್ಥಾನವೂ ಪೂರ್ವಮೀಮಾಂಸೆಯಲ್ಲಿ ದೊರಕಿಲ್ಲ. ಆದ್ದರಿಂದಲೇ ಈ ಮೀಮಾಂಸಾ ಶಾಸ್ತ್ರವು ಪೂರ್ವಮೀಮಾಂಸೆ ಯೆನಿಸಿಕೊಳ್ಳುತ್ತದೆ. ಇದು ಧರ್ಮಾರ್ಥಕಾಮಗಳೆಂಬ ತ್ರಿವರ್ಗವನ್ನು ಪ್ರತಿಪಾದಿಸಿತೇ ಹೊರತು ಪರಮಪುರುಷಾರ್ಥವಾದ ಮೋಕ್ಷವನ್ನು ಪ್ರತಿಪಾದಿಸಲಿಲ್ಲ. ಆದ್ದರಿಂದ ಈ ಶಾಸ್ತ್ರವು ಪೂರ್ವಪಕ್ಷವಾಗಿ ಉಳಿಯಿತು. ಉತ್ತರಪಕ್ಷವಾಗಲಿಲ್ಲ. ಏವಂಚ ವೇದಾಂತವು ಉತ್ತರಪಕ್ಷವಾಗಿ ಉತ್ತರ ಮೀಮಾಂಸೆಯೆನಿಸಿಕೊಂಡು ವೈದಿಕ ಸಿದ್ಧಾಂತ ಸ್ವರೂಪವನ್ನು ತಳೆದು ಜನಪ್ರಿಯವಾಯಿತು. ಕರ್ಮ, ಭಕ್ತಿ, ಯೋಗ ಮುಂತಾದ ಎಲ್ಲ ವಿಷಯಗಳನ್ನು ಆಶ್ರಯಿಸಿ ಆ ಸಾಧನಗಳ ಸ್ವರೂಪವನ್ನು ನಿರೂಪಿಸಿ ಅವುಗಳನ್ನು ಸ್ವಸ್ಥಾನಗಳಲ್ಲಿ

ನಿಲ್ಲಿಸಿ ಆತ್ಮಜ್ಞಾನವೇ ಮೋಕ್ಷಕ್ಕೆ ಸಾಧನವೆಂದು ಕರ್ಮ ಮೊದಲಾದವು ಚಿತ್ತಶುದ್ಧಿಯಾಗಿ ಲಭಿಸುವ ಆತ್ಮಜ್ಞಾನಕ್ಕೆ ಕಾರಣಗಳಾಗುತ್ತವೆಯೆಂದು ನಿಶ್ಚಯಿಸಿ ಹೇಳಿದೆ. ಅಲ್ಲದೆ ಮೋಕ್ಷದ ಸ್ವರೂಪವನ್ನು ನಿರೂಪಿಸಿ, ಮುಕ್ತನಾದವನಿಗೆ ಪುನರ್ಜನ್ಮವಿಲ್ಲವೆಂದೂ, ಸಂಸಾರದಿಂದ ಪೂರ್ಣವಾಗಿ ಬಿಡುಗಡೆ ಯಾಗುತ್ತದೆಂದೂ, ಮುಕ್ತನಾದವನು ಪರಮಾನಂದವನ್ನು ಅನುಭವಿಸುತ್ತಾ ಆನಂದಸ್ವರೂಪನಾಗಿಯೇ ಉಳಿಯುತ್ತಾನೆಂದೂ ವೇದಪ್ರಾಮಾಣ್ಯವನ್ನು ಅವಲಂಬಿಸಿ ನಿರ್ಧರಿಸಿ ಹೇಳಿದೆ. ಇವೇ ಮೊದಲಾದ ಕಾರಣಗಳಿಂದ ವೇದಾಂತ ದರ್ಶನವು ಸರ್ವಜನಪ್ರಿಯವಾಗಿ ಭಾರತೀಯರ ಹೃದಯದಲ್ಲಿ ನೆಲೆಸಿತು.

ವೇದಾಂತವೆಂದರೆ ವೇದಗಳ ಕಡೆಯಲ್ಲಿ ಬರುವ ಉಪನಿಷತ್ತುಗಳೆಂದೂ, ವೇದಗಳ ಸಿದ್ಧಾಂತವೆಂದೂ ಅರ್ಥವಾಗುತ್ತದೆ. ಒಟ್ಟಿನಲ್ಲಿ ವೇದಾಂತವೆಂದರೆ ಉಪನಿಷತ್ತು ಎಂದು ಅಭಿಪ್ರಾಯ. ಈ ದರ್ಶನದ ಪ್ರಾಚೀನ ಆಚಾರ್ಯರೆಂದರೆ ಭರ್ತೃಪ್ರಪಂಚ, ಭರ್ತೃಮಿತ್ರ, ಭರ್ತೃಹರಿ, ಉಪವರ್ಷ, ದ್ರವಿಡಾಚಾರ್ಯ ಮತ್ತು ಸುಂದರಪಾಂಡ್ಯ ಎಂದು ಹೇಳಬಹುದು. ಇವರೆಲ್ಲರೂ ವೇದಾಂತವು ಅದ್ವೈತವನ್ನೇ ಪ್ರತಿಪಾದಿಸುತ್ತದೆಂದು ನಂಬಿದ್ದರೂ ಇವರ ಪ್ರಕ್ರಿಯೆಯಲ್ಲಿ ಕೆಲವು ಮತಭೇದಗಳಿದ್ದವು. ಈ ತೊಡಕುಗಳನ್ನೆಲ್ಲ ನಿವಾರಿಸಿ ಅದ್ವೈತ ಸಿದ್ಧಾಂತದ ಒಂದು ಸ್ವರೂಪವನ್ನು ನಿಶ್ಚಯಿಸಿ ದೃಢಗೊಳಿಸಿದವರು ಶ್ರೀ ಶಂಕರಾಚಾರ್ಯರು. ಆಚಾರ್ಯರ ಸಾಕ್ಷಾತ್ ಗುರುಗಳು ಶ್ರೀ ಗೋವಿಂದ ಭಗವತ್ಪಾದರೆಂದೂ ಅವರ ಗುರುಗಳೇ ಶ್ರೀ ಗೌಡಪಾದಾಚಾರ್ಯರೆಂದೂ ಸಂಪ್ರದಾಯವು ನಿಶ್ಚಯಿಸಿದೆ. ಏವಂಚ ಶ್ರೀ ಗೌಡಪಾದರು ಶ್ರೀ ಶಂಕರಾಚಾರ್ಯರ ಪರಮ ಗುರುಗಳೆನಿಸುತ್ತಾರೆ.

ಶ್ರೀ ಗೌಡಪಾದರು:

ಶ್ರೀ ಶಂಕರಾಚಾರ್ಯರ ಕಾಲ ಕ್ರಿಸ್ತಶಕ ಏಳನೇ ಶತಮಾನವೆಂದು ಸಂಶೋಧಕರು ಈಗ ಹೇಳಿದ್ದಾರೆ. ಆದ್ದರಿಂದ ಇವರ ಪರಮಗುರುಗಳಾದ ಶ್ರೀ ಗೌಡಪಾದಾಚಾರ್ಯರ ಕಾಲ ಕ್ರಿಸ್ತಶಕ ಆರನೇ ಶತಮಾನದ ಅಂತ್ಯಭಾಗವೆಂದು ಸ್ಥೂಲವಾಗಿ ಹೇಳಬಹುದು. ಗೌಡಪಾದ ಎಂಬ ಶಬ್ದದಲ್ಲಿ ಇರುವ ಗೌಡ ಎಂಬುದು ಪ್ರಾಯೇಣ ಈಗಿನ ಬಂಗಾಳವನ್ನು ಸೂಚಿಸುತ್ತದೆ. ಇದು ದೇಶನಾಮವಾಯಿತೇ ಹೊರತು ಆಚಾರ್ಯರ ನಿಜವಾದ ನಾಮಧೇಯವಾಗಲಿಲ್ಲ. ಕೆಲವು ಸಂಶೋಧಕರ ಅಭಿಪ್ರಾಯದಂತೆ ಶ್ರೀ ಗೌಡಪಾದರು ಮೂಲತಃ ಮಹಾರಾಷ್ಟ್ರ ದೇಶದವರು. ಈಗಿನ ಸಾಂಗ್ಲಿ ಜಿಲ್ಲೆಯ ವೀತ ಎಂಬ ಹಳ್ಳಿ ಇವರ ಜನ್ಮಸ್ಥಳ. ತಂದೆ ವಿಠ್ಠಲದೇವ, ತಾಯಿ ಗುಣವತಿ. ದತ್ತದೇವ ಎಂಬುದು ಆಚಾರ್ಯರ ಜನ್ಮನಾಮ. ಉಪನಯನವಾದೊಡನೆ ದತ್ತದೇವನು ವಿರಕ್ತಿಯಿಂದ ಮನೆಬಿಟ್ಟು ಹೊರಟು ಹೋದನು. ಅನಂತರದ ಇತಿಹಾಸ ಸರಿಯಾಗಿ ತಿಳಿದು

ಬಂದಿಲ್ಲ. ಪ್ರಾಯಶಃ ಗೌಡ ದೇಶಕ್ಕೆ ಹೋಗಿ ಯಾರೋ ಆಚಾರ್ಯನ ಶಿಷ್ಯನಾಗಿ ವೇದಾಂತವನ್ನು ಕಲಿತು ತಪೋಬಲದಿಂದ ಆಚಾರ್ಯ ಸ್ಥಾನವನ್ನೇರಿದರೆಂದೂ ಅನಂತರ ಗೌಡಪಾದರೆಂದು ವಿಖ್ಯಾತರಾದರೆಂದೂ ಊಹಿಸಬಹುದಾಗಿದೆ. ಇವರನ್ನೇ ಅದ್ವೈತ ಸಂಪ್ರದಾಯವು ಆತ್ಮಜ್ಞಾನಿಗಳೆಂದೂ ಪರಮ ಪ್ರಾಮಾಣಿಕರೆಂದೂ ನಂಬಿದೆ.

ಶ್ರೀ ಗೌಡಪಾದಾಚಾರ್ಯರು ರಚಿಸಿರುವರೆಂದು ಹೇಳಲಾದ ಗ್ರಂಥಗಳು:

1. ಆಗಮಶಾಸ್ತ್ರ ಅಥವಾ ಗೌಡಪಾದಕಾರಿಕಾ (ಗೌಡಪಾದರ ಮಾಂಡೂಕ್ಯ ಕಾರಿಕಾ)
2. ಬ್ರಹ್ಮಸೂತ್ರ ಭಾಷ್ಯ
3. ಉತ್ತರಗೀತಾ ಭಾಷ್ಯ
4. ಸಾಂಖ್ಯಕಾರಿಕಾ ಭಾಷ್ಯ
5. ಅನುಗೀತಾ ಭಾಷ್ಯ
6. ಸುಭಗೋದಯ ಸ್ತೋತ್ರಮ್
7. ಚಿದಾನಂದ ಕೇಲೀ ವಿಲಾಸ
8. ಶ್ರೀ ವಿದ್ಯಾರತ್ನ ಸೂತ್ರಮ್
9. ಶ್ರೀ ದುರ್ಗಾಸಪ್ತಶತೀ ಭಾಷ್ಯ
10. ಶ್ರೀ ನೃಸಿಂಹತಾಪಿನ್ಯುಪನಿಷದ್ ಭಾಷ್ಯ
11. ಯೋಗದರ್ಶನ ಭಾಷ್ಯ

ಇವುಗಳಲ್ಲದೆ ಇನ್ನೂ ಹಲವು ಗ್ರಂಥಗಳನ್ನು ಶ್ರೀ ಗೌಡಪಾದಾಚಾರ್ಯರು ರಚಿಸಿದ್ದಾರೆಂದು ಪ್ರತೀತಿಯಿದೆ. ಇವುಗಳಲ್ಲಿಯೂ ಕೆಲವು ಗ್ರಂಥಗಳು ಮಾತ್ರವೇ ನಮಗಿಂದು ದೊರಕುತ್ತವೆ. ದೊರಕಿರುವ ಗ್ರಂಥಗಳಲ್ಲಿಯೂ ಮಾಂಡೂಕ್ಯಕಾರಿಕೆಯು ಮಾತ್ರ ಶ್ರೀ ಶಂಕರಾಚಾರ್ಯರಿಂದ ವ್ಯಾಖ್ಯಾತ ವಾಗಿರುತ್ತದೆ.

ಉತ್ತರಗೀತಾ:

ಭಗವದ್ಗೀತೆಯ ಅನಂತರ ಬಂದ ಗ್ರಂಥವಿದೆಂದು ಇದರ ಹೆಸರೇ ಸೂಚಿಸುತ್ತದೆ. ಮಹಾಭಾರತ ಯುದ್ಧ ಸಮಯದಲ್ಲಿ ಗೀತೋಪದೇಶವು ನಡೆದದ್ದರಿಂದ ಆಗ ಅರ್ಜುನನು ವ್ಯಾಕುಲಚಿತ್ತನಾಗಿದ್ದನು. ಭಗವಂತನ ಉಪದೇಶವನ್ನು ಸರಿಯಾಗಿ ಗ್ರಹಿಸಿ ಸ್ಮರಣೆಯಲ್ಲಿ ಇಟ್ಟುಕೊಳ್ಳದೇ ಹೋದನು. ಯುದ್ಧವು ಮುಗಿದ ಮೇಲೆ ಕಾಲಾಂತರದಲ್ಲಿ ಮನಸ್ಸು ಶಾಂತವಾದಾಗ

ಗೀತೋಪದೇಶ ಮಾಡಿರುವುದನ್ನು ಸ್ಮರಿಸಿಕೊಂಡನು. ಉಪದಿಷ್ಟ ವಿಷಯಗಳಲ್ಲಿ ಕೆಲವು ವಿಷಯಗಳು ಸ್ಮರಣೆಗೆ ಬಾರದೇ ಹೋದುದರಿಂದ ಹಿಂದೆ ಹೇಳಿದುದನ್ನು ಇನ್ನೊಮ್ಮೆ ತಿಳಿಸಿಕೊಡಬೇಕೆಂದು ಶ್ರೀಕೃಷ್ಣನನ್ನು ಕೇಳಿಕೊಂಡಾಗ ಈ ಉತ್ತರಗೀತೆಯು ಪ್ರವೃತ್ತವಾಯಿತೆಂಬುದು ಪೂರ್ವೋತ್ತರ ಸಂಗತಿಯಾಗುತ್ತದೆ.

ಪ್ರಕೃತದಲ್ಲಿ ಈ ಪೂರ್ವಸಂಗತಿಯು ಮೂಲಗ್ರಂಥದಲ್ಲಿ ಉಕ್ತವಾಗದಿದ್ದರೂ ಗೌಡಪಾದೀಯ ಭಾಷ್ಯದಲ್ಲಿ ಉಕ್ತವಾಗಿದೆ. ಅರ್ಜುನನು ಪರಬ್ರಹ್ಮದ ಸ್ವರೂಪವನ್ನು ನಿರೂಪಿಸಿ, ಅದನ್ನು ತಿಳಿದೊಡನೆ ಮಾನವನು ಸಂಸಾರ ಬಂಧನದಿಂದ ಮುಕ್ತನಾಗುವನಷ್ಟೆ! ಅದನ್ನು ತಿಳಿಸಿಕೊಡು ಎಂದು ಭಗವಂತನನ್ನು ಕೇಳಿಕೊಳ್ಳುತ್ತಾನೆ. ಬ್ರಹ್ಮಸ್ವರೂಪವನ್ನು ತಾನೇ ಹೇಳಿ ಮತ್ತೆ ಅದನ್ನೇ ತಿಳಿಸಿಕೊಡು ಎಂದು ಕೇಳುವುದು ಸ್ವಲ್ಪ ವಿಲಕ್ಷಣವಾಗಿ ಕಾಣುತ್ತದೆ. ಶ್ರೀಕೃಷ್ಣನು ಆ ವಿಷಯವೇನನ್ನೂ ಪ್ರಸ್ತಾವಿಸದೇ ಬ್ರಹ್ಮ ಸ್ವರೂಪವನ್ನೂ, ಜ್ಞಾನಸಾಧನವನ್ನೂ, ಮುಕ್ತನ ಸ್ಥಿತಿಯನ್ನೂ ಸ್ಪಷ್ಟವಾಗಿ ತಿಳಿಸಿಕೊಡುತ್ತಾನೆ. ಈ ಗ್ರಂಥವು ಭಗವದ್ಗೀತೆಯಂತೆ ಹಲವಾರು ವಿಧಗಳಲ್ಲಿ ವಿಸ್ತೃತವಾಗಿಲ್ಲ. ಪ್ರಕೃತಕ್ಕೆ ಎಷ್ಟು ಆವಶ್ಯಕವೋ ಅಷ್ಟು ಮಾತ್ರ ಇಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿದೆ. ಒಟ್ಟಿನಲ್ಲಿ ಮುಮುಕ್ಷುಗಳು ಅವಶ್ಯವಾಗಿ ಓದಬೇಕಾದ ಗ್ರಂಥವಿದು.

ಒಂದು ವಿಶೇಷವೇನೆಂದರೆ ಭಗವದ್ಗೀತೆಯಲ್ಲಿರುವಂತೆ ಇಲ್ಲಿರುವ ವಾಕ್ಯರಚನೆ ಲಲಿತವೂ ಸುಲಭವೂ ಆಗಿಲ್ಲ. ವ್ಯಾಕರಣ ವಿರುದ್ಧ ಪ್ರಯೋಗಗಳು ಬಹಳ ಇವೆ. ಅವು ಆರ್ಷಪ್ರಯೋಗಗಳೆಂದು ಹೇಳಬಹುದಾದರೂ ವಾಕ್ಯಗಳಲ್ಲಿ ವಿಶೇಷಣ ವಿಶೇಷ್ಯಗಳ ಹೊಂದಾಣಿಕೆ ಸಮರ್ಪಕವಾಗಿಲ್ಲ. ಕೆಲವು ಶ್ಲೋಕಗಳಲ್ಲಿ ಕರ್ತೃಪದ, ಕರ್ಮಪದ, ಕ್ರಿಯಾಪದಗಳಿಗೆ ಸಾಮಂಜಸ್ಯ ಕೂಡುವುದಿಲ್ಲ. ಭಾಷ್ಯದಲ್ಲಿ ಇದನ್ನು ತೋರಿಸದಿದ್ದರೂ ಶ್ಲೋಕದ ತಾತ್ಪರ್ಯವನ್ನು ಸ್ಪಷ್ಟವಾಗಿ ಬರೆದಿದ್ದಾರೆ. ಅದನ್ನನುಸರಿಸಿ ನಮ್ಮ ಕನ್ನಡ ಅನುವಾದವನ್ನು ಬರೆಯಲಾಗಿದೆ – ಎಂಬುದನ್ನು ಓದುಗರು ಗಮನಿಸಬೇಕು.

ಇಲ್ಲಿ ಹೇಳಬೇಕಾದ ಒಂದು ವಿಶೇಷ ಉಂಟು. 'ಅನುಗೀತಾ' ಎಂಬ ಒಂದು ಗ್ರಂಥ ಪ್ರಸಿದ್ಧವಾಗಿದೆ. ಅದು ಮಹಾಭಾರತದ ಆಶ್ವಮೇಧಿಕ ಪರ್ವದಲ್ಲಿ ದೊರೆಯುತ್ತದೆ. ಈ ಉತ್ತರಗೀತೆಯ ಗೌಡಪಾದೀಯ ಭಾಷ್ಯದಲ್ಲಿ ಬರೆದ ಪೂರ್ವಸಂಗತಿಯು ಅನುಗೀತೆಗೆ ಮೊದಲು ಮೂಲಗ್ರಂಥದಲ್ಲಿಯೇ ಬಂದಿದೆ. ಅರ್ಜುನನು ಶ್ರೀ ಕೃಷ್ಣನನ್ನು ಕುರಿತು ''ಭಗವನ್, ನೀನು ಯುದ್ಧಪ್ರಸಂಗದಲ್ಲಿ ವಿಸ್ತಾರವಾಗಿ ಅಧ್ಯಾತ್ಮ ವಿಚಾರವನ್ನು ಉಪದೇಶಿಸಿದ್ದೀಯೆ. ನಾನು ಯುದ್ಧದ ಕಾರಣದಿಂದ ವ್ಯಾಕುಲಚಿತ್ತನಾಗಿದ್ದೆ. ನಿನ್ನ ಉಪದೇಶವನ್ನು ಸರಿಯಾಗಿ ಗ್ರಹಿಸಲಿಲ್ಲ. ಅದನ್ನು ಈಗ ಉಪದೇಶಿಸು'' ಎಂದು ಪ್ರಾರ್ಥಿಸುತ್ತಾನೆ. ಆಗ ಶ್ರೀಕೃಷ್ಣನು

ಕುಪಿತನಾಗಿ ''ದುರ್ಮೇಧಾ ಹ್ಯಸಿ ಪಾಂಡವ – ಅರ್ಜುನ, ನೀನು ಬುದ್ಧಿಹೀನ. ಆಗ ನಾನು ನಿನಗೋಸ್ಕರ ಯೋಗಯುಕ್ತಚಿತ್ತನಾಗಿ ಆವಿಷ್ಟ್ಯನೋ ಎಂಬಂತೆ ಅಧ್ಯಾತ್ಮ ವಿಚಾರವನ್ನು ವಿವರವಾಗಿ ಹೇಳಿದೆನು. ಈಗ ಆ ರೀತಿ ಹೇಳಲು ನನ್ನಿಂದಲೇ ಆಗದು !'' ಎಂದು ಛೇಡಿಸುತ್ತಾನೆ. ಅನಂತರ ಅನುಕಂಪೆಯಿಂದ ಅನುಗೀತೆಯನ್ನು ಹೇಳುತ್ತಾನೆ.

ಹೀಗಿರುವಾಗ ಮತ್ತೆ ಈ ಉತ್ತರಗೀತೆ ಬರಲು ಕಾರಣವೇನು. ಮತ್ತೆ ಅರ್ಜುನನು ಇದೇ ವಿಷಯವನ್ನು ಕೇಳುವಷ್ಟು ಮರುಳನಲ್ಲ. ಕೇಳಿದರೂ ಶ್ರೀಕೃಷ್ಣನು ಹೇಳುತ್ತಿರಲಿಲ್ಲ !

ಮಹಾಭಾರತದ ಯಾವ ಪ್ರತಿಯಲ್ಲಿಯೂ ನನಗೆ ಈ 'ಉತ್ತರಗೀತೆ' ದೊರೆಯಲಿಲ್ಲ. ಹರಿವಂಶದಲ್ಲಿಯೂ ಸಿಗಲಿಲ್ಲ. ಯಾವ ವಿದ್ವಾಂಸರಿಂದಲೂ ಸಮರ್ಪಕವಾದ ಉತ್ತರ ದೊರೆಯಲಿಲ್ಲ. ಆದ್ದರಿಂದ ನನ್ನ ಊಹೆ ಹೀಗಿದೆ –

ಈ ಉತ್ತರಗೀತೆಯು ಲೋಕಪ್ರಸಿದ್ಧವಾಗಿರುವುದರಿಂದಲೂ ಶ್ರೀ ಗೌಡಪಾದೀಯ ವ್ಯಾಖ್ಯಾನವಿರುವುದರಿಂದಲೂ ಪ್ರಾಮಾಣಿಕವೇ ಹೌದು. ಅನುಗೀತೆಯ ಕಡೆಯಲ್ಲಿ ಇದರಲ್ಲಿರುವ ಮೂರು ಅಧ್ಯಾಯಗಳು ಬಂದಿರಬೇಕು. ಆದ್ದರಿಂದಲೇ ಈ ಉತ್ತರಗೀತೆಗೆ ಪೂರ್ವಸಂಗತಿ ದೊರೆಯುವುದಿಲ್ಲ. ನೇರವಾಗಿ ''ಅರ್ಜುನ ಉವಾಚ'' ಎಂದು ಆರಂಭವಾಗಿದೆ. ಇದು ಮಹಾಭಾರತದ ಇನ್ನೊಂದು ಕಡೆಯಲ್ಲಿ ಬಂದಿದ್ದರೆ ಪೂರ್ವಸಂಗತಿ ಇರಬೇಕಾಗಿತ್ತು. ಅಲ್ಲದೆ ಅರ್ಜುನನೇ ಪರಬ್ರಹ್ಮಸ್ವರೂಪವನ್ನು ವಿಸ್ತಾರವಾಗಿ ಹೇಳಿದ್ದಾನೆ. ಇದು ಆತನಿಗೆ ಮೊದಲು ತಿಳಿದದ್ದು ಹೇಗೆ ? ಅನುಗೀತೆಯನ್ನು ಉಪದೇಶಿಸಿದ ಮೇಲೆ ಪೂರ್ವಸಂಸ್ಕಾರದ ಬಲದಿಂದ ಭಗವದ್ಗೀತೆಯಲ್ಲಿ ಹೇಳಿದಂತೆ ಬ್ರಹ್ಮದ ಸ್ವರೂಪ ಅವನಿಗೆ ಸ್ಮೃತವಾಗಿದೆ. ಆದ್ದರಿಂದ ಬ್ರಹ್ಮನಿಷ್ಠೆಯ ಉತ್ತರದಲ್ಲಿ ಆತ್ಮಸ್ವರೂಪವನ್ನು ಬಲ್ಲವನು ಹೇಗಿರುತ್ತಾನೆ ಎಂಬುದನ್ನು ಭಗವಂತನು ವಿಸ್ತಾರವಾಗಿ ಹೇಳಿದ್ದಾನೆ. ಮೂರನೆಯ ಅಧ್ಯಾಯದಲ್ಲಿ ಕೇವಲ ಹದಿನೆಂಟು ಶ್ಲೋಕಗಳಿವೆ. ಯಾವ ಅಧ್ಯಾಯವೂ ಇಷ್ಟು ಚಿಕ್ಕದಾಗಿ ಇರಲಾರದು. ಈ ಹದಿನೆಂಟು ಶ್ಲೋಕಗಳಾದ ಮೇಲೆ ಮಹಾಭಾರತದ ಕಥೆ ಮುಂದುವರಿದಿರಬೇಕು.

ಈ ಉತ್ತರಗೀತೆಯ ವಿಷಯವು ಬಹಳ ಪ್ರೌಢವಾದ್ದರಿಂದ ಓದುಗರಿಗೆ ಅನುಕೂಲವಾಗಲೆಂದೂ, ಅಧ್ಯಯನಯೋಗ್ಯವಾಗಿದೆಯೆಂದೂ ಭಾವಿಸಿ ಯಾರೋ ಪೂರ್ವಜರು ಈ ಮೂರು ಅಧ್ಯಾಯಗಳನ್ನೂ ಪ್ರತ್ಯೇಕಿಸಿ ಬರೆದುಕೊಂಡು ಅಧ್ಯಯನ ಅಧ್ಯಾಪನಗಳಲ್ಲಿ ತೊಡಗಿರಬೇಕು. ಅನುಗೀತೆಯ ಉತ್ತರದಲ್ಲಿ ಬಂದದ್ದರಿಂದ 'ಉತ್ತರ ಗೀತೆ' ಎಂಬ ವ್ಯವಹಾರ ಬಂದಿದೆ. ಇದು ಪ್ರಕ್ಷಿಪ್ತವಲ್ಲ. ಆದ್ದರಿಂದಲೇ ಇದರಲ್ಲಿ ಅನೇಕ ಆರ್ಷಪ್ರಯೋಗಗಳು ಕಂಡುಬರುತ್ತವೆ. ಇದು ನನ್ನ ಅಭಿಪ್ರಾಯ. ವಿದ್ವಾಂಸರು ಪರಿಶೀಲಿಸಬೇಕು.

ಈ ಗ್ರಂಥವು ಶ್ರೇಯೋಭಿಲಾಷಿಗಳಿಗೆ ತುಂಬ ಉಪಯುಕ್ತವಾದದ್ದು. ಅವರೆಲ್ಲರೂ ಇದನ್ನು ಮನನ ಮಾಡಿ ಭಗವತ್ಕೃಪೆಗೆ ಪಾತ್ರರಾಗಲೆಂದು ಹಾರೈಸುತ್ತೇನೆ.

ಉಡುಪಿವಾಸಿಗಳಾದ ಶ್ರೀ ಹರೀಶ ಶೆಣ್ಯೈ ಅವರು ಈ ಗ್ರಂಥವನ್ನು ನನಗೆ ಕಳಿಸಿ ಶ್ರೀ ಗೌಡಪಾದೀಯ ಭಾಷ್ಯದ ಭಾವಾನುವಾದವನ್ನು ಕನ್ನಡದಲ್ಲಿ ಬರೆದು ಕೊಡಬೇಕೆಂದು ಕೇಳಿಕೊಂಡರು. ವಯೋನಿಮಿತ್ತದಿಂದಲೂ ದೃಷ್ಟಿದೋಷ ದಿಂದಲೂ ಬಳಲುತ್ತಿರುವ ನನಗೆ ಈ ಕಾರ್ಯವು ಕ್ಲಿಷ್ಟವೆಂದು ತೋರಿತು. ಆದರೂ ಶ್ರೀ ಶೆಣ್ಯೈ ಅವರ ಪ್ರೀತಿ-ವಿಶ್ವಾಸಗಳಿಗೂ ಒತ್ತಾಯಕ್ಕೂ ಮಣಿದು ಈ ಕಾರ್ಯವನ್ನು ಯಥಾಮತಿಯಾಗಿ ನಡೆಸಿದ್ದಾಗಿದೆ. ಅನುವಾದದಲ್ಲಿ ನಾನು ಎಲ್ಲಾದರೂ ಮುಗ್ಗರಿಸಿರಬಹುದು. ವಿದ್ವಾಂಸರಾದ ವಾಚಕರು ಅದನ್ನು ಮನ್ನಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಸಾಂಖ್ಯಕಾರಿಕಾ ಭಾಷ್ಯವನ್ನು ಅನುವಾದಿಸುವಾಗ ನನ್ನ ಮಿತ್ರರಾದ ಯಲ್ಲಾಪುರ ಕೃಷ್ಣಶರ್ಮಾ ಅವರು ಮನೆಗೆ ಬಂದು ನಾನು ಹೇಳಿದಂತೆ ಬರೆದುಕೊಟ್ಟು ಉಪಕಾರ ಮಾಡಿರುತ್ತಾರೆ. ಅದೇ ರೀತಿಯಲ್ಲಿ ಈ ಉತ್ತರಗೀತಾ ಭಾಷ್ಯವನ್ನು ಅನುವಾದಿಸುವಲ್ಲೂ ಬರವಣಿಗೆಯಲ್ಲಿ ನನಗೆ ಪೂರ್ಣ ಸಹಕಾರ ನೀಡಿದ್ದಾರೆ. ಅವರಿಗೂ ಅವರ ಕುಟುಂಬದವರಿಗೂ ಭಗವಂತನು ಶ್ರೇಯಸ್ಸನ್ನು ನೀಡಿ ಅನುಗ್ರಹಿಸಲೆಂದು ಹಾರೈಸುತ್ತೇನೆ. ಈ ಕಾರ್ಯವನ್ನು ನನಗೆ ವಹಿಸಿ ನನ್ನಲ್ಲಿ ಪ್ರೀತ್ಯಾದರಗಳನ್ನು ತೋರಿಸಿರುವ ಶ್ರೀ ಹರೀಶ ಶೆಣ್ಯೈ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಬೆಂಗಳೂರು – 35
24-10-2008

ಇತೀ ಸಜ್ಜನ ವಿಧೇಯ
ವಿದ್ವಾನ್ ಎನ್. ರಂಗನಾಥ ಶರ್ಮಾ

॥ श्री ॥

ಶ್ರೀ ಗೌಡಪಾದಾಚಾರ್ಯ ವಿರಚಿತ
ದೀಪಿಕಾಟೀಕಾ ಸಹಿತ
ಉತ್ತರಗೀತಾ ಪ್ರವಚನ
(ಕನ್ನಡ ಅನುವಾದ)

ಶ್ರೀ ಗಣೇಶಾಯ ನಮಃ

ಅಖಂಡಂ ಸಚ್ಚಿದಾನಂದಮವಾಙ್ಮನಸಗೋಚರಂ ।
ಆತ್ಮಾನಮಖಿಲಾಧಾರಮಾಶ್ರಯೇಽಭೀಷ್ಟಸಿದ್ಧಯೇ ॥

अर्जुन उवाच –

यदेकं निष्कलं ब्रह्म व्योमातीतं निरञ्जनम् ।
अप्रतर्क्यमविज्ञेयं विनाशोत्पत्तिवर्जितम् ॥ १ ॥

ಅರ್ಜುನನು ಭಾರತ ಯುದ್ಧದ ಆರಂಭದಲ್ಲಿ ಶ್ರೀಕೃಷ್ಣನಿಂದ ಉಪದಿಷ್ಟವಾದ ''ಅಶೋಚ್ಯಾನನ್ವಶೋಚಸ್ತ್ವಮ್'' ಇತ್ಯಾದಿ ಭಗವದ್ಗೀತಾ ವಚನವನ್ನು ಮರೆತು ಬಿಟ್ಟಿದ್ದನು. ವಿಷಯಭೋಗಾಸಕ್ತ ಮನಸ್ಸಿನಿಂದ ವಿಸ್ಮೃತವಾದ ಆತ್ಮತತ್ತ್ವದ ವಿಚಾರವನ್ನು ಮತ್ತೆ ತಿಳಿಯಬೇಕೆಂದು ಬಯಸಿ ಶ್ರೀಕೃಷ್ಣ ಭಗವಂತನನ್ನು ಕುರಿತು ಈ ರೀತಿ ಹೇಳಿದನು –

ಹೇ ಕೇಶವ ! ಯಾವ ಆತ್ಮತತ್ತ್ವವನ್ನು ಅರಿತುಕೊಂಡೊಡನೆ ಮಾನವನು ಮುಕ್ತನಾಗುತ್ತಾನೋ ಅಂತಹ ಆತ್ಮಸ್ವರೂಪವನ್ನು ಈಗ ತಿಳಿಸಿಕೊಡು. ಯಾವುದು ಏಕವಾಗಿಯೇ ಇರುತ್ತದೆಯೋ, ಅವಯವರಹಿತವಾಗಿದೆಯೋ, ಆಕಾಶವೇ ಅಂತ್ಯವಾದ ಇಪ್ಪತ್ತನಾಲ್ಕು ತತ್ತ್ವಗಳನ್ನು ಮೀರಿದೆಯೋ ಸ್ವಯಂಪ್ರಕಾಶವೋ, ತರ್ಕಕ್ಕೆ ನಿಲುಕುವುದಿಲ್ಲವೋ, ಯಾವ ಪ್ರಮಾಣಕ್ಕೂ ನಿಲುಕದಿರುವುದೋ, ಉತ್ಪತ್ತಿ, ವಿನಾಶವರ್ಜಿತವೋ ಅಂತಹ ಆತ್ಮಸ್ವರೂಪವನ್ನು ಹೇಳು.

1. ಏಕಂ = ಸಜಾತೀಯ ವಿಜಾತಿಯ ಸ್ವಗತ ಭೇದರಹಿತ.
2. ನಿಷ್ಕಲಂ = ಕಲಾ = ಅವಯವ.
3. ಅವ್ಯಕ್ತ, ಮಹತ್, ಅಹಂಕಾರ, ಪಂಚ ತನ್ಮಾತ್ರೆಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಮನಸ್ಸು, ಪೃಥ್ವಿಯಿಂದ ವ್ಯೋಮದವರೆಗಿನ ಪಂಚ ಮಹಾಭೂತಗಳು– ಇವಿಷ್ಟು ಇಪ್ಪತ್ತನಾಲ್ಕು ವಸ್ತುಗಳು. ಇವುಗಳಿಗೆ ಅತೀತವಾದದ್ದು ಬ್ರಹ್ಮ.

कारणं योगनिर्मुक्तं हेतुसाधनवर्जितम् ।
हृदयाम्बुजमध्यस्थं ज्ञानज्ञेयस्वरूपकम् ।
तत्क्षणादेव मुच्येत यज्ज्ञानाद्ब्रूहि केशव ॥ २ ॥

ಮತ್ತು ಸರ್ವೋತ್ಪತ್ತಿಗೆ ಕಾರಣವಾದದ್ದೂ, ಇನ್ನೊಂದರ ಸಂಬಂಧವಿಲ್ಲದ್ದೂ, ನಿಮಿತ್ತಕಾರಣವಾಗಲಿ ಉಪಾದಾನಕಾರಣವಾಗಲಿ ಇಲ್ಲದ್ದೂ, ಹೃದಯಕಮಲದ ಮಧ್ಯದಲ್ಲಿ ನೆಲೆಸಿರುವುದೂ, ಸ್ವಯಂ ಜ್ಞಾನಸ್ವರೂಪವೂ ಜ್ಞೇಯವಾದ ವಿಷಯಸ್ವರೂಪವೂ ಆದ ಬ್ರಹ್ಮದ ವಿಷಯವನ್ನು ಹೇಳು.

1. ಪ್ರತಿಯೊಂದು ವಸ್ತುವಿಗೂ ನಿಮಿತ್ತಕಾರಣವೂ ಉಪಾದಾನಕಾರಣವೂ ಇರುತ್ತದೆ. ಗಡಿಗೆಗೆ ಕುಂಬಾರನು ನಿಮಿತ್ತಕಾರಣ. ಮಣ್ಣು ಉಪಾದಾನ ಕಾರಣ. ಬ್ರಹ್ಮವು ಅನಾದಿಯಾದ್ದರಿಂದ ಇದಕ್ಕೆ ಈ ಎರಡು ಕಾರಣಗಳೂ ಇರುವುದಿಲ್ಲ.

श्री भगवानुवाच –

साधु पृष्टं महाबाहो बुद्धिमानसि पाण्डव ।
यन्मां पृच्छसि तत्त्वार्थमशेषं प्रवदाम्यहम् ॥ ३ ॥

ಅರ್ಜುನನು ಈ ರೀತಿ ಪ್ರಶ್ನೆ ಮಾಡಲಾಗಿ ಭಗವಾನ್ ಶ್ರೀಕೃಷ್ಣನು ಸಂತೋಷದಿಂದ ಅರ್ಜುನನನ್ನು ಅಭಿನಂದಿಸುತ್ತಾ ಹೀಗೆಂದನು–

ಮಹಾಬಾಹು – ಪಾಂಡವ, ಸರಿಯಾದ ಪ್ರಶ್ನೆಯನ್ನೇ ಕೇಳಿದೆ. ನೀನು ಬುದ್ಧಿವಂತ. ಯಾವ ಪರಮ ತತ್ತ್ವವನ್ನು ನೀನು ಕೇಳುತ್ತಿದ್ದೀಯೋ ಅದೆಲ್ಲವನ್ನೂ ಸ್ಪಷ್ಟವಾಗಿ ತಿಳಿಯುವಂತೆ ಹೇಳುವೆನು, ಕೇಳು.

आत्ममन्त्रस्य हंसस्य परस्परसमन्वयात् ।
योगेन गतकामानां भावना ब्रह्म चक्षते ॥ ४ ॥

ಆತ್ಮನಲ್ಲಿ ತಾತ್ಪರ್ಯವುಳ್ಳ ಪ್ರಣವವೆಂಬ ಮಂತ್ರಕ್ಕೂ ಹಂಸನಾದ ಪರಮಾತ್ಮನಿಗೂ ಅನ್ಯೋನ್ಯ ಸಮನ್ವಯವಾಗುವುದರಿಂದ, ಯೋಗಬಲದಿಂದ ಕಾಮಾದಿಷಡ್ವರ್ಗಗಳನ್ನು ಜಯಿಸಿದ ಜ್ಞಾನಿಗಳ ಭಾವನೆಯೇ ಬ್ರಹ್ಮವೆಂದು ಬಲ್ಲವರು ಹೇಳುತ್ತಾರೆ.

1. ಆತ್ಮಬೋಧಕವಾದ ಮಂತ್ರವೆಂದರೆ ಪ್ರಣವ. ಅದೇ ಓಂಕಾರ.
2. ಹಂತಿ ಸಂಸಾರಂ ಇತಿ ಹಂಸಃ = ಸಂಸಾರ ಬಂಧನವನ್ನು ನಾಶಗೊಳಿಸುವ ಪರಮಾತ್ಮ ಎಂದರ್ಥ.
3. ಪ್ರಣವಕ್ಕೂ ಪರಮಾತ್ಮನಿಗೂ ಭೇದವಿಲ್ಲ. ಅಭಿಧಾನ, ಅಭಿಧೇಯಗಳಿಗೆ ಎಂದರೆ ಶಬ್ದಾರ್ಥಗಳಿಗೆ ಅಭೇದವುಂಟು. ಯೋಗಿಗಳಿಗೆ ಗೋಚರಿಸುವ ಓಂಕಾರವೇ ಬ್ರಹ್ಮವೆಂದು ತಾತ್ಪರ್ಯ.
4. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯವೆಂಬ ಅರಿಷಡ್ವರ್ಗವನ್ನು ಇಲ್ಲಿ ಕಾಮ ಎಂಬ ಶಬ್ದದಿಂದ ಗ್ರಹಿಸಲಾಗಿದೆ.
5. ಭಾವನಾ ಎಂದರೆ ಜ್ಞಾನಗೋಚರ ಎಂದು ತಾತ್ಪರ್ಯ.

शरीरिणामजस्यान्तं हंसत्वं पारदर्शनम् ।
हंसो हंसाक्षरं चैव कूटस्थं यत्तदक्षरम् ॥ ५ ॥
तद्विद्वानक्षरं प्राप्य जह्यान्मरणजन्मनी ॥ ६ ॥

ಜನ್ಮರಹಿತನಾದ ಜೀವನಿಗೆ ಅವಧಿಭೂತವಾದದ್ದು ಹಂಸ. ಇದೇ ಪರಬ್ರಹ್ಮ. ಶರೀರಧಾರಿಗಳಾದ ಜೀವರಿಗೆ ಪರಮಜ್ಞಾನವಾದದ್ದು ಹಂಸ. ಎಂದರೆ ಬ್ರಹ್ಮ. ಏವಂ ಚ ಬ್ರಹ್ಮ ಮತ್ತು ಪ್ರಣವ ಇವೆರಡಕ್ಕೂ ಕೂಟಸ್ಥವಾದ ಎಂದರೆ ಸಾಕ್ಷಿಭೂತವಾದ ಪ್ರತ್ಯಗಾತ್ಮವೇ ಅಕ್ಷರವೆನಿಸುತ್ತದೆ. ಜ್ಞಾನಿಯು ಈ ಅಕ್ಷರವನ್ನು ತಿಳಿದಾಗ ಜನನ ಮರಣಗಳೆರಡನ್ನೂ ತ್ಯಜಿಸಿಬಿಡುತ್ತಾನೆ – ಎಂದರೆ ಮುಕ್ತನಾಗುತ್ತಾನೆ.

ವಿವರಣೆ = ಜೀವನು ಜನ್ಮರಹಿತನಾಗಿದ್ದಾನೆ. ಈತನ ಮೂಲಸ್ವರೂಪವು ಬ್ರಹ್ಮವಾಗಿದೆ. ಇವೆರಡಕ್ಕೂ ಪ್ರತ್ಯಗಾತ್ಮನು ಸಾಕ್ಷಿಭೂತನಾಗಿದ್ದಾನೆ. ಈ ಕೂಟಸ್ಥನೇ ಪರಬ್ರಹ್ಮ. ಇದನ್ನು ತಿಳಿದವನು ಮುಕ್ತನಾಗುತ್ತಾನೆ ಎಂದು ತಾತ್ಪರ್ಯ.

1. ಕೂಟಸ್ಥ = ಕೂಟ ಎಂದರೆ ಮಾಯೆ. ಇದರಲ್ಲಿ ಅಧಿಷ್ಠಿತನಾದವನು ಪರಮಾತ್ಮ.

काकीमुखककारान्त उकारश्चेतनाकृतिः ।
अकारस्य च लुप्तस्य कोऽर्थः संप्रतिपद्यते ॥ ७ ॥

(ಕಾಕೀಮುಖ – ಎಂದು ಆರಂಭವಾಗುವ ಏಳನೆಯ ಶ್ಲೋಕವು ಕೂಟ ಶ್ಲೋಕದಂತೆ ತುಂಬ ಕಠಿಣವಾಗಿದೆ. ಇದರ ಅರ್ಥವನ್ನು ತಿಳಿಸುವುದೂ ಕಷ್ಟ. ತಿಳಿದುಕೊಳ್ಳುವುದೂ ಕಷ್ಟ. ಆದ್ದರಿಂದ ಗೌಡಪಾದೀಯ ಭಾಷ್ಯಕ್ಕೆ ಅಲ್ಲಲ್ಲಿ ಕೆಲವು ಮಾತುಗಳನ್ನು ಸೇರಿಸಿ ಅರ್ಥವನ್ನು ಬರೆಯಲಾಗುವುದು.)

ಕ= ಸುಖ, ಅಕ = ದುಃಖ, ಕಾಕವೆಂದರೆ ಸುಖ-ದುಃಖಗಳು. ಇವುಗಳನ್ನುಳ್ಳವನು ಕಾಕೀ-ಜೀವಾತ್ಮ. ಉಳ್ಳವನು ಎಂಬ ಅರ್ಥದಲ್ಲಿ 'ಇನ್' ಪ್ರತ್ಯಯವು ಬಂದು ಕಾಕೀ ಶಬ್ದವು ನಿಷ್ಪನ್ನವಾಗಿದೆ. ಕಾಕಿಯ ಮುಖ ಕಾಕೀಮುಖ. ಕಾಕಿಮುಖ ಎಂದು ಇಕಾರವು ಹ್ರಸ್ವವಾಗಬೇಕಾಗಿತ್ತು. ದೀರ್ಘವಿರುವುದು ಆರ್ಷಪ್ರಯೋಗ.

ಇಲ್ಲಿ ಮುಖ ಶಬ್ದಕ್ಕೆ ಮುಖಸ್ಥಾನದಲ್ಲಿರುವ ಬಿಂಬ ಎಂದರ್ಥ. ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡಾಗ ಮುಖವು ಬಿಂಬ ಎನಿಸುತ್ತದೆ. ಕನ್ನಡಿಯಲ್ಲಿ ಕಾಣಿಸುವ ಆಕೃತಿಯು ಪ್ರತಿಬಿಂಬ. ಪರಬ್ರಹ್ಮವು ಬಿಂಬ. ಜೀವನು ಅದರ ಪ್ರತಿಬಿಂಬ. ವಿದ್ಯೆಯು ನಡುವೆ ಕನ್ನಡಿ ಇದ್ದಂತೆ. ಏವಂಚ ಕಾಕೀಮುಖ ಎಂದರೆ ಜೀವಾತ್ಮನ ಬಿಂಬವಾದ ಪರಬ್ರಹ್ಮ ಎಂದರ್ಥ.

ಲೋಕದಲ್ಲಿ ಒಂದು ಹೇಳಿಕೆಯುಂಟು. ಕಾಗೆಗೆ ಒಂದೇ ಕಣ್ಣು ಇರುತ್ತದೆಯೆಂದೂ ಕಾಗೆ ಎಡಕ್ಕೆ ನೋಡಿದಾಗ ಕಣ್ಣು ಎಡಗಡೆಯ ಸ್ಥಾನಕ್ಕೂ ಬಲಕ್ಕೆ ನೋಡಿದಾಗ ಕಣ್ಣು ಬಲಗಡೆಯ ಸ್ಥಾನಕ್ಕೂ ಸರಿದಾಡುತ್ತದೆಯಂತೆ ! ಇದಕ್ಕೆ 'ಕಾಕಾಕ್ಷಿ ಗೋಳಕ ನ್ಯಾಯ' ಎಂದು ಹೆಸರು. ಈ ನ್ಯಾಯದಂತೆ ಶ್ಲೋಕದಲ್ಲಿರುವ ಮುಖ ಶಬ್ದವನ್ನು ಈಗ ಇನ್ನೊಂದು ಕಡೆಗೆ ಅನ್ವಯಿಸಬೇಕು. ಮುಖ ಶಬ್ದಕ್ಕೆ 'ಪ್ರಾಥಮಿಕ'– (ಆದಿಯಲ್ಲಿರುವ) ಎಂಬ ಅರ್ಥವೂ ಇದೆ. ಶ್ಲೇಷದಿಂದ ಈ ಅರ್ಥವನ್ನೂ ಇಲ್ಲಿ ಗ್ರಹಿಸಬೇಕು. ಆಗ 'ಕಾಕೀಮುಖ' ಎಂದರೆ ಕಾಕೀ ಶಬ್ದದ ಆದಿಯಲ್ಲಿರುವ – ಎಂದರ್ಥ. 'ಕಾಕೀಮುಖಕ ಕಾರಾಂತ' ಎಂದರೆ ಹಾಗೆ. ಆದಿಯಲ್ಲಿರುವ ಕಕಾರದ ಮುಂದಿರುವ 'ಅಕಾರ' ಎಂದು ಅರ್ಥ. ಮುಖ ಶಬ್ದಕ್ಕೆ ಅಗ್ರದಲ್ಲಿರುವ (ಮುಂದಿರುವ) ಎಂಬ ಇನ್ನೊಂದು ಅರ್ಥವೂ ಉಂಟು. ಕಾಕೀ ಶಬ್ದದ ಮುಂದಿರುವ 'ಮಕಾರ'ವೆಂದು ಇನ್ನೊಂದು ಅರ್ಥ. 'ಉಕಾರ'ವನ್ನು ಶ್ಲೋಕದಲ್ಲಿಯೇ ಹೇಳಿದೆ. ಏವಂಚ 'ಅ ಉ ಮ್' ಎಂಬ ಮೂರು ಅಕ್ಷರಗಳನ್ನು ಹೇಳಿದಂತಾಯಿತು. ಇವುಗಳ ಅರ್ಥವೇನೆಂಬುದನ್ನು ನೋಡೋಣ.

ಪಂಚೀಕೃತ ಪಂಚಮಹಾಭೂತಗಳು, ಅವುಗಳ ಕಾರ್ಯಗಳು ವಿರಾಟ್ ಎನಿಸುತ್ತವೆ. ಇದು ಆತ್ಮನ ಸ್ಥೂಲ ಶರೀರ. ಇಂದ್ರಿಯಗಳಿಂದ ವಸ್ತುಗಳನ್ನು

ತಿಳಿಯುವುದೇ ಜಾಗರಿತ - ಎಚ್ಚರ. ಇದಕ್ಕೆ ಅಭಿಮಾನಿಯಾದ ಆತ್ಮನೇ ವಿಶ್ವ. ಈ ಮೂರು ಅಕಾರದ ಅರ್ಥ. ಉಕಾರವೆಂದರೆ, ಚೇತನಾಕೃತಿಃ ಎಂಬಲ್ಲಿ ಆಕೃತಿ ಶಬ್ದಕ್ಕೆ ವಾಚಕವೆಂದರ್ಥ. ಪಂಚೀಕೃತವಾಗದ ಎಂದರೆ ಅಪಂಚೀಕೃತವಾದ ಪಂಚ ಮಹಾಭೂತಗಳು. ಅವುಗಳೇ ಶಬ್ದ ತನ್ಮಾತ್ರೆ ಮುಂತಾದ ಪಂಚ ತನ್ಮಾತ್ರೆಗಳು. ಇವು ಮತ್ತು ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಮನೋಬುದ್ಧಿಗಳು. ಒಟ್ಟು ಈ ಹದಿನೇಳು ತತ್ತ್ವಗಳು ಆತ್ಮನ ಲಿಂಗಶರೀರ. ಈ ಲಿಂಗಶರೀರಿಗೆ ಹಿರಣ್ಯಗರ್ಭ ಎಂದು ಹೆಸರು. ಇದೇ ಆತ್ಮನ ಸೂಕ್ಷ್ಮ ಶರೀರ ಎಂದೂ ಉಕ್ತವಾಗಿದೆ. ಕನಸಿನಲ್ಲಿ ಜಾಗರಿತದ ಸ್ಮರಣೆಯುಂಟಾಗುತ್ತದೆ. ಏವಂಚ ಕನಸು ಮತ್ತು ಸೂಕ್ಷ್ಮ ಶರೀರವುಳ್ಳವನು ತೈಜಸ. ಈ ಮೂರು ಉಕಾರದ ಅರ್ಥ. ಇಲ್ಲಿ ಕಾಕೀಮುಖ ಶಬ್ದದ ಉಕಾರಕ್ಕೆ ಹಿಂದಿರುವ ಮಕಾರವಿದೆಯಷ್ಟೆ. ಇದಕ್ಕೆ ಆತ್ಮನ ಅಜ್ಞಾನ ಎಂದರ್ಥ. ಇದನ್ನು ಅವ್ಯಾಕೃತ ಎಂದು ಹೇಳುತ್ತಾರೆ. ಶುದ್ಧ ಬ್ರಹ್ಮಜ್ಞಾನದಿಂದ ಮಾತ್ರ ಈ ಅಜ್ಞಾನವು ತೊಲಗುತ್ತದೆ. ಈ ಅಜ್ಞಾನದಿಂದಲೇ ಸುಷುಪ್ತಿಯುಂಟಾಗುತ್ತದೆ. ಅಜ್ಞಾನ ಮತ್ತು ಸುಷುಪ್ತಿಗಳಿಗೆ ಅಭಿಮಾನಿಯಾದ ಆತ್ಮನಿಗೆ ಪ್ರಾಜ್ಞ ಎಂದು ಹೆಸರು. ಅಜ್ಞಾನ, ಸುಷುಪ್ತಿ (ನಿದ್ರೆ) ಪ್ರಾಜ್ಞ– ಇವು ಮೂರು ಮಕಾರದ ಅರ್ಥ. ಓಂ ಎಂಬಲ್ಲಿ ಅಕಾರವು ಉಕಾರದಲ್ಲಿಯೂ, ಉಕಾರವು ಮಕಾರದಲ್ಲಿಯೂ, ಮಕಾರವು ಓಂಕಾರವೆಂಬ ನಾದದಲ್ಲಿಯೂ ಲುಪ್ತವಾಗಿವೆಯೆಂದು ತಿಳಿಯಬೇಕು. ಈಗ ಓಂಕಾರವೇ ಪರಬ್ರಹ್ಮ. ಕೋಽರ್ಥಃ = ಕಕಾರದ ಮುಂದಿರುವ ಅಕಾರದ ಅರ್ಥವಾದ ವಿಶ್ವನೆಂಬ ಜೀವನು ಹಿಂದೆ ಹೇಳಿದ ಪರಬ್ರಹ್ಮವೇ ಸಂಪ್ರತಿಪದ್ಯತೇ – ಆಗುತ್ತಾನೆ.

''ಅಯಮಾತ್ಮಾ ಬ್ರಹ್ಮ'' 'ಸ ಯಶ್ಚಾಯಂ ಪುರುಷೇ, ಯಶ್ಚಾಸಾವಾದಿತ್ಯೇ ಸ ಏಕಃ'' ''ತತ್ತ್ವಮಸಿ'' ''ಅಹಂ ಬ್ರಹ್ಮಾಸ್ಮಿ'' ಇತ್ಯಾದಿ ಶ್ರುತಿಗಳು ಜೀವಾತ್ಮ ಪರಮಾತ್ಮರ ಐಕ್ಯಕ್ಕೆ ಪ್ರಮಾಣ.

ಅಥವಾ ಈ ಶ್ಲೋಕಕ್ಕೆ ಇನ್ನೊಂದು ರೀತಿಯ ಅರ್ಥವನ್ನೂ ಹೇಳಬಹುದು. ಹಿಂದೆ ಹೇಳಿದಂತೆ ಕಾಕಿ ಎಂದರೆ ಜೀವ. ಆ ಶಬ್ದದ ಮುಂದೆ ಇರುವ ಕಕಾರದ ಅಂತ್ಯದಲ್ಲಿರುವ ಅಕಾರಕ್ಕೆ ಬ್ರಹ್ಮ ಎಂದರ್ಥ. ಇದು ಚೇತನಾಕೃತಿಯಾಗಿದೆ ಎಂದರೆ ಜೀವದ ಆಕಾರವನ್ನು ಪಡೆದಿದೆ ಎಂದರ್ಥ. ಬ್ರಹ್ಮವೇ ಅನಿರ್ವಾಚ್ಯವಾದ ಅವಿದ್ಯೆಯಿಂದ ಜೀವಸ್ವರೂಪವನನ್ನು ಹೊಂದಿ ಸಂಸಾರವನ್ನು ಅನುಭವಿಸುತ್ತದೆ ಎಂದರ್ಥ. ಲುಪ್ತಸ್ಯ – ಅವಿದ್ಯೆಯಿಂದ ಲುಪ್ತವಾದ ಸ್ಪಷ್ಟ ರೂಪವುಳ್ಳ ಅಕಾರಸ್ಯ – ಬ್ರಹ್ಮದ ಅರ್ಥವಾದ ಜೀವವು ''ಕಃ ಸನ್ ಪ್ರತಿಪದ್ಯದೇ'' ಪೂರ್ವೋಕ್ತವಾದ ರೀತಿಯಲ್ಲಿ ಬ್ರಹ್ಮವೇ ಸಂಪ್ರತಿಪದ್ಯತೇ – ಆಗುತ್ತದೆ.

''ಈಕಾರಶ್ಚೇತನಾಕೃತಿಃ'' ಎಂದು ಪಾಠಾಂತರವಿದೆ. ಅಲ್ಲಿ ಈಕಾರವೆಂದರೆ ಮೂಲಪ್ರಕೃತಿ. ಅದು ಬ್ರಹ್ಮದ ಕ್ರಿಯಾಪರವಾದ ಶಕ್ತಿ. ಆಕೃತಿಯೆಂದರೆ ಶಕ್ತಿ ಎಂದು ಅರ್ಥ ಹೇಳಬೇಕು. ಲುಪ್ತಸ್ಯ - ಕ್ರಮವಾಗಿ ಕ್ಷಯಿಸುತ್ತಿರುವ ಅವಿದ್ಯೆಯುಳ್ಳ ಅಕಾರಸ್ಯ – ಜೀವರೂಪವುಳ್ಳ ಬ್ರಹ್ಮಕ್ಕೆ ಕೋऽರ್ಥಃ ಕಕಾರಕ್ಕೆ ಮುಂದಿರುವ ಅಕಾರಕ್ಕೆ ಲಕ್ಷ್ಯಾರ್ಥವಾದ ಬ್ರಹ್ಮಸ್ವರೂಪವು ಸಂಪ್ರತಿಪದ್ಯತೇ– ಪ್ರಾಪ್ತವಾಗುತ್ತದೆ ಎಂದರ್ಥ. ಅವಿದ್ಯೆಯನ್ನು ಕ್ಷಯಿಸಿಕೊಂಡ ಉಪಾಸಕನು ಕ್ರಮವಾಗಿ ಬ್ರಹ್ಮವೇ ಆಗುತ್ತಾನೆ ಎಂದು ತಾತ್ಪರ್ಯ. ಹೀಗೆ ಕ್ರಮವಾಗಿ ಆಗುವ ಮುಕ್ತಿಯನ್ನು ಶ್ರುತಿಯು ಹೀಗೆ ಹೇಳುತ್ತದೆ– **''ಆಪ್ಲವಸ್ವ ಪ್ರಪ್ಲವಸ್ವ ಆಂಡೀಭವ ಜ ಮಾ ಮುಹುಃ । ಸುಖಾದಿಂ ದುಃಖನಿಧನಾಂ ಪ್ರತಿಮುಂಚಸ್ವಸ್ವಾಂ ಪುರಮ್ ॥''**

ಇದರ ಅರ್ಥ – ಹೇ ಜ ! ಜನನ ಮರಣಗಳಿಗೊಳಗಾದ ಎಲೇ ಜೀವನೇ ! ಆಪ್ಲವಸ್ವ = ಕ್ರಮವಾಗಿ ಜೀವನ್ಮುಕ್ತನಾಗು. ಪ್ರಪ್ಲವಸ್ವ = ಅನಂತರ ವಿದೇಹ ಮುಕ್ತನಾಗಿಬಿಡು. ಪುನಃ = ಮತ್ತೆ ಆಂಡೀ = ಬ್ರಹ್ಮಾಂಡದಲ್ಲಿ ಒಬ್ಬನು, ಮಾ ಭವ = ಆಗಬೇಡ. ಸುಖಾದಿಂ = ವಿಷಯಸುಖಕ್ಕೆ ಕಾರಣವೂ ದುಃಖನಿಧನಾಂ = ದುಃಖದಲ್ಲಿ ಕೊನೆಗೊಳ್ಳತಕ್ಕದ್ದೂ ಆದ ಸ್ವಾಂ ಪುರಂ = ನಿನ್ನ ಸ್ಥೂಲಸೂಕ್ಷ್ಮ ದೇಹಗಳನ್ನು ಪ್ರತಿಮುಂಚಸ್ವ = ತ್ಯಜಿಸಿ ಬಿಡು.

ಎಲೈ ಜೀವನೇ ! ನೀನು ಮೊದಲು ಜೀವನ್ಮುಕ್ತನಾಗಿ ಅನಂತರ ವಿದೇಹಮುಕ್ತನಾಗಿ ಬ್ರಹ್ಮವೇ ಆಗಿಬಿಡು. ಬ್ರಹ್ಮನಿರ್ಮಿತವಾದ ಈ ವಿಶ್ವದಲ್ಲಿ ಒಬ್ಬನಾಗಿ ಮತ್ತೆ ಹುಟ್ಟಬೇಡ – ಎಂದು ತಾತ್ಪರ್ಯ. ಮನುಷ್ಯ ಜನ್ಮವಾದರೋ ಮೊದಲು ಸುಖವನ್ನು ನೀಡಿ ಅನಂತರ ದುಃಖದಲ್ಲೇ ಪರ್ಯವಸಾನವಾಗುತ್ತದೆ.

गच्छँस्तिष्ठन् सदाकालं वायुस्वीकरणं परम् ।
सर्वकालप्रयोगेण सहस्त्रायुर्भवेन्नरः ॥ ८ ॥

ಈ ಪ್ರಕಾರವಾಗಿ ಯೋಗಧಾರಣೆಯಿಂದ ಪ್ರಾಣಾಯಾಮ ಪರಾಯಣನಾದವನಿಗೆ ಜೊತೆಯಲ್ಲಿ ಇನ್ನೊಂದು ಫಲವೂ ಲಭಿಸುತ್ತದೆ. ಮನುಷ್ಯನು ಸಾಮಾನ್ಯವಾಗಿ ಶತವರ್ಷಜೀವಿಯು. ಅಲ್ಲಿಯವರೆಗೆ ದೃಢವಾದ ಇಂದ್ರಿಯಗಳುಳ್ಳವನೂ ಆಗಿರುತ್ತಾನೆ. ಆದರೆ ಯೋಗಿಯು ಗಮನಕಾಲದಲ್ಲಿ ಹೋಗುತ್ತಾ, ಸುಮ್ಮನಿರುವಾಗ ನಿಲ್ಲುತ್ತಾ ಹೀಗೆ ಸರ್ವಕಾಲದಲ್ಲಿಯೂ ಈ ಪ್ರಾಣಾಯಾಮವನ್ನು ಮಾಡುತ್ತಿದ್ದರೆ ಸಾವಿರ ವರ್ಷಗಳ ವರೆಗೆ ಬದುಕಿರುವನು. ಇದು ಗೌಣವಾದ ಫಲ.

खमध्ये कुरु चात्मानमात्ममध्ये च खं कुरु ॥ ९ ॥
आत्मानं खमयं कृत्वा न किंचिदपि चिन्तयेत् ॥ १० ॥

ಹಂಸಸ್ವರೂಪವಾದ ಬ್ರಹ್ಮದ ಸಾಕ್ಷಾತ್ಕಾರವಾಗುವ ವರೆಗೂ ಯೋಗಿಯು ಅದನ್ನೇ ಸದಾ ಧ್ಯಾನಿಸುತ್ತಿರಬೇಕು. ದಹರಾಕಾಶದ ಮಧ್ಯದಲ್ಲಿ ಪರಮಾತ್ಮನನ್ನೂ, ಪರಮಾತ್ಮನ ಮಧ್ಯದಲ್ಲಿ ದಹರಾಕಾಶವನ್ನೂ ಊಹಿಸಿಕೊಂಡು ಧ್ಯಾನಿಸುತ್ತಿರು. ಪರಮಾತ್ಮನು ಆಕಾಶಸ್ವರೂಪನೆಂದು ತಿಳಿದು ಬ್ರಹ್ಮಾತಿರಿಕ್ತವಾದ ಯಾವುದನ್ನೂ ಧ್ಯಾನಿಸಬಾರದು. ಅಥವಾ ಖ ಎಂದರೆ ಜೀವ ಎಂದರ್ಥ. ''ಆಕಾಶ ಶರೀರಂ ಬ್ರಹ್ಮ'' ಎಂದು ಶ್ರುತಿವಚನವಿದೆ, ಆದ್ದರಿಂದ ಜೀವನಲ್ಲಿ ಬ್ರಹ್ಮವನ್ನೂ ಬ್ರಹ್ಮನಲ್ಲಿ ಜೀವನನ್ನೂ ಅಭೇದಸ್ವರೂಪದಿಂದ ಧ್ಯಾನಿಸುತ್ತಿರಬೇಕು ಎಂದರ್ಥ. ಬ್ರಹ್ಮವು ಜೀವಸ್ವರೂಪದಲ್ಲಿದೆಯೆಂದು ಭಾವಿಸಿ ಬೇರೆ ಏನನ್ನೂ ಧ್ಯಾನಿಸಬಾರದು.

स्थिरबुद्धिरसंमूढो ब्रह्मविदुब्रह्मणि स्थित: ।
बहिर्व्योम स्थितं नित्यं नासाग्रे च व्यवस्थितम् ।
निष्कलं तं विजानीयाच्छ्वासो यत्र लयं गत: ॥ ११ ॥

ಹೀಗೆ ಬ್ರಹ್ಮಜ್ಞಾನಿಯಾದವನು ಸ್ಥಿರಬುದ್ಧಿಯುಳ್ಳವನಾಗಿ ಈ ಸಮ್ಯಗ್ ಜ್ಞಾನದಿಂದ ರಹಿತನಾಗದೆಯೇ ಸದಾ ಬ್ರಹ್ಮನಿಷ್ಠನಾಗಿ ಇರತಕ್ಕದ್ದು. ಉಸಿರು ಎಲ್ಲಿ ಕೊನೆಗೊಳ್ಳುವುದೋ ಅಂತಹ ನಾಸಾಗ್ರದಲ್ಲಿ ಆ ಬ್ರಹ್ಮವಿದೆಯೆಂದೂ, ಅದರ ಆಚೆಗೆ ಇರುವ ಆಕಾಶವೆಲ್ಲವೂ ಬ್ರಹ್ಮವೇ ಎಂದು ತಿಳಿದು ನಿಷ್ಕಲವಾದ ಬ್ರಹ್ಮಸ್ವರೂಪವನ್ನು ಅರಿತುಕೊಳ್ಳಬೇಕು.

पुटद्वयविनिर्मुक्तो वायुर्यत्र विलीयते ।
तत्र संस्थं मन: कृत्वा तं ध्यायेत्पार्थ ईश्वरम् ॥ १२ ॥

ಅರ್ಜುನ ! ಎರಡು ಮೂಗಿನ ಹೊಳ್ಳೆಗಳಿಂದಲೂ ಹೊರಡುವ ವಾಯುವು ಎಲ್ಲಿ ಲಯವಾಗುವುದೋ ಆ ಸ್ಥಳದಲ್ಲಿ ಎಂದರೆ ನಾಸಾಗ್ರದಲ್ಲಿ ಮನಸ್ಸನ್ನು ನಿಲ್ಲಿಸಿ ಪರಮೇಶ್ವರನನ್ನು ಮುಂದೆ ಹೇಳುವ ಕ್ರಮದಲ್ಲಿ ಧ್ಯಾನಿಸಬೇಕು.

निष्कलं तं विजानीयात्षडूर्मिरहितं शिवम् ॥ १३ ॥

ಅವಯವ ರಹಿತನೂ, ಷಡೂರ್ಮಿಗಳಿಂದ ರಹಿತನೂ, ಮಂಗಳಸ್ವರೂಪನೂ ಆದ ಪರಮಾತ್ಮನನ್ನು ಧ್ಯಾನಿಸುತ್ತಿರಬೇಕು.

1. ಷಡೂರ್ಮಿಗಳು = ಹಸಿವು, ಬಾಯಾರಿಕೆ, ಶೋಕ, ಮೋಹ, ಮುಪ್ಪು ಮತ್ತು ಮರಣ.

सर्वशून्यं निराभासं समाधिस्थस्य लक्षणम् ।
त्रिशून्यं यो विजानीयात्स तु मुच्येत बन्धनात् ॥ १४ ॥

ಮನಃಶೂನ್ಯವಾದ್ದರಿಂದ ವೃತ್ತಿಜ್ಞಾನರಹಿತವೂ, ಆದ್ದರಿಂದಲೇ ಬುದ್ಧಿವೃತ್ತಿಯಿಲ್ಲದ್ದೂ, ವ್ಯಾಜರಹಿತವೂ, ಭ್ರಮರಹಿತವೂ ಆದ ಬ್ರಹ್ಮವನ್ನು ಚಿಂತಿಸಬೇಕು.

ಟಿಪ್ಪಣಿ: ಮನಸ್ಸಿನ ವ್ಯಾಪಾರಕ್ಕೆ ವೃತ್ತಿ ಎಂದು ಹೆಸರು. ಜೀವರಿಗೆ ಆಗುವ ಘಟಜ್ಞಾನ ಪಟಜ್ಞಾನ ಮುಂತಾದವು ವೃತ್ತಿ ಜ್ಞಾನಗಳು. ಬ್ರಹ್ಮವಸ್ತುವಿಗೆ ಮನಸ್ಸು ಎಂಬ ಒಂದು ವಸ್ತುವಿಲ್ಲವಾದ್ದರಿಂದ ಅದಕ್ಕೆ ಮನೋವ್ಯಾಪಾರವಿಲ್ಲ. ಬುದ್ಧಿಯು ಮನಸ್ಸಿನ ಇನ್ನೊಂದು ರೂಪವೇ ಆದ್ದರಿಂದ ಬುದ್ಧಿವ್ಯಾಪಾರವೂ ಇಲ್ಲ. ಬ್ರಹ್ಮವೇ ಅಖಂಡ ಜ್ಞಾನಸ್ವರೂಪವೆಂದು ವೇದಾಂತದ ಮತ.

ಚಿತ್ತವೃತ್ತಿಯೇ ಮೊದಲಾದ ಎಲ್ಲ ವ್ಯಾಪಾರಗಳಿಂದ ರಹಿತನೂ ಭ್ರಮರಹಿತನೂ ಆಗಿರುವುದು ಸಮಾಧಿಸ್ಥನಾದವನ ಲಕ್ಷಣವಾಗಿದೆ. ಹಿಂದೆ ಹೇಳಿದಂತೆ ಪ್ರಭಾಶೂನ್ಯವೂ ಮನಃಶೂನ್ಯವೂ ಬುದ್ಧಿಶೂನ್ಯವೂ ಆದ್ದರಿಂದ ತ್ರಿಶೂನ್ಯವೂ ಆದ ಬ್ರಹ್ಮವನ್ನು ಯಾವನು ತಿಳಿಯುತ್ತಾನೋ ಅವನು ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ.

स्वयमुच्चलिते देहे देही न्यस्तसमाधिना ।
निश्चलं तं विजानीयात्समाधिस्थस्य लक्षणम् ॥ १५ ॥

ಜೀವನ್ಮುಕ್ತನಿಗೆ ದೇಹಾದಿಗಳಲ್ಲಿ ಯಾವ ಆಸಕ್ತಿಯೂ ಇರುವುದಿಲ್ಲವೆಂಬುದನ್ನು ಈ ಶ್ಲೋಕದಲ್ಲಿ ಹೇಳಲಾಗಿದೆ–

ಆತನ ದೇಹವು ಪ್ರಾರಬ್ಧಕರ್ಮದ ವಾಸನಾಬಲದಿಂದ ಗಮನಕ್ರಿಯಾದಿಗಳನ್ನು ಮಾಡುತ್ತಿದ್ದರೂ ತಾನು ನಿಶ್ಚಲವಾದ ಸಮಾಧಿಯಲ್ಲಿರುವುದರಿಂದ ಆತ್ಮನೂ ಸಹ ನಿಶ್ಚಲನಾಗಿದ್ದಾನೆಂದೂ ಯಾವ ಗಮನಾದಿಕ್ರಿಯೆಯನ್ನೂ ಮಾಡುತ್ತಿಲ್ಲವೆಂದೂ ತಿಳಿಯುತ್ತಾನೆ. ಇದು ಸಮಾಧಿಯಲ್ಲಿರತಕ್ಕವನ ಲಕ್ಷಣ.

अमात्रं शब्दरहितं स्वरव्यञ्जनवर्जितम् ।
बिन्दुनादकलातीतं यस्तं वेद स वेदवित् ॥ १६ ॥

ಆತ್ಮನು ಹ್ರಸ್ವ ದೀರ್ಘ ಪ್ಲುತಾದಿ ಮಾತ್ರೆಗಳಿಂದ ರಹಿತನೂ, ಸ್ವರ ವ್ಯಂಜನಗಳಿರುವ ಶಬ್ದಗಳಿಗೆ ಅಗೋಚರನೂ, ಬಿಂದುನಾದ ಕಲೆಗಳಿಗೆ ಅತೀತನೂ ಆಗಿದ್ದಾನೆಂದು ಯಾವಾತನು ಬಲ್ಲನೋ ಅವನೇ ವೇದಾರ್ಥವನ್ನು ಬಲ್ಲವನು.

ವಿವರಣೆ: – ಯಾವ ಶಬ್ದದಲ್ಲಾದರೂ ಸ್ವರ ವ್ಯಂಜನಗಳಿರುತ್ತವೆ. ಸ್ವರವು ಹ್ರಸ್ವ ದೀರ್ಘಾದಿಗಳಲ್ಲಿ ಒಂದಾಗಿರುತ್ತದೆ. ಇಂತಹ ಯಾವ ಶಬ್ದಕ್ಕೂ ಪರಮಾತ್ಮನು ಗೋಚರನಲ್ಲ.

ಬಿಂದು = ಅನುಸ್ವಾರ.

ನಾದ = ಗಂಟಲಿನಲ್ಲಿ ಹೊರಡುವ– ಘಂಟಾನಾದಕ್ಕೆ ಸದೃಶವಾಗಿ ಹೊರಡುವ ಅನುರಣನ ಧ್ವನಿ.

ಕಲಾ = ನಾದದ ಒಂದು ಅಂಶ.

प्राप्ते ज्ञानेन विज्ञाने ज्ञेये च हृदि संस्थिते ।
लब्धशान्तिपदे देहे न योगो नैव धारणा ॥ १७ ॥

ಈ ರೀತಿಯಲ್ಲಿ ಆತ್ಮತತ್ತ್ವಜ್ಞಾನವಾದ ಮೇಲೆ ಆತನು ಮಾಡಬೇಕಾದದ್ದು ಏನೂ ಇರುವುದಿಲ್ಲ –

ಪರೋಕ್ಷಜ್ಞಾನದಿಂದ ಅಥವಾ ಶಾಸ್ತ್ರಾಚಾರ್ಯರ ಉಪದೇಶದಿಂದಾದ ಜ್ಞಾನದಿಂದ ಆತ್ಮನ ಅಪರೋಕ್ಷಜ್ಞಾನವಾದ ಮೇಲೆ ಎಂದರೆ ಆತ್ಮಸಾಕ್ಷಾತ್ಕಾರವಾದ ಮೇಲೆ ಜ್ಞೇಯವಾದ ಆತ್ಮನ ಅನುಭವವೇ ಆಯಿತು. ಹೃದಯದಲ್ಲಿ ಆತ್ಮನು ನೆಲೆಸಿದ ಮೇಲೆ ದೇಹಾಭಿಮಾನಿಯಾದ ಜೀವನಿಗೆ ಪರಮಶಾಂತಿಯುಂಟಾಗುವುದು. ಆಮೇಲೆ ಯೋಗನಿಷ್ಠೆಯೂ ಬೇಡ. ಧ್ಯಾನ ಮಾಡಬೇಕಾದದ್ದೂ ಇರುವುದಿಲ್ಲ.

यो वेदादौ स्वर: प्रोक्तो वेदान्ते च प्रतिष्ठित: ।
तस्य प्रकृतिलीनस्य य: पर: स महेश्वर: ॥ १८ ॥

ಹೀಗೆ ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡವನು ಮುಕ್ತನಾಗಿ ಈಶ್ವರನೇ ಆಗಿಬಿಡುತ್ತಾನೆ. ಆತನ ಸ್ವರೂಪವೇನೆಂದರೆ–

ಯಾವ ಸ್ವರವು ಸಕಲ ವೇದಗಳ ಆದಿಯಲ್ಲಿಯೂ, ವೇದಗಳ ಅಂತದಲ್ಲಿಯೂ, ವೇದಗಳ ಮಧ್ಯದಲ್ಲಿಯೂ ಪ್ರತಿಷ್ಠಿತವಾಗಿದೆಯೋ ಅಂತಹ ಮತ್ತು ಪ್ರಕೃತಿಯಾದ ಪರಾವಾಕ್ಕಿನಲ್ಲಿ ಸ್ಥಿತವಾದ ಪ್ರಣವಕ್ಕೆ ಪರನಾದ ಎಂದರೆ ವಾಕ್‌ಚತುಷ್ಟಯಕ್ಕೂ ಪ್ರೇರಕನಾದವನು ಯಾರೋ ಅವನೇ ಪರಮೇಶ್ವರ.

ವಿವರಣೆ: – ಓಂಕಾರವು ವೇದಗಳ ಆದಿ ಮಧ್ಯ ಅಂತಗಳಲ್ಲಿ ಪ್ರತಿಷ್ಠಿತವಾಗಿದೆ. ''ವೇದಾಂತೇ ಚ'' ಎಂಬ ಚ ಶಬ್ದದಿಂದ ''ವೇದಗಳ ಮಧ್ಯದಲ್ಲಿ'' ಎಂಬ ಅರ್ಥವನ್ನು ಗ್ರಹಿಸಬೇಕು. ಪರಾ, ಪಶ್ಯಂತೀ ಮಧ್ಯಮಾ, ವೈಖರೀ ಎಂದು ವಾಕ್ಕು ನಾಲ್ಕು ವಿಧ.

ಪರಾ ಎಂಬುದೇ ಉಳಿದ ಮೂರಕ್ಕೂ ಪ್ರಕೃತಿ. ಓಂಕಾರವೇ ಪರಾವಾಕ್ ಸ್ವರೂಪವಾದ್ದರಿಂದ ಅದನ್ನು ಪ್ರಕೃತಿಲೀನ ಎಂದು ಕರೆಯಲಾಗಿದೆ. ಈ ನಾಲ್ಕು ಬಗೆಯ ವಾಕ್ಕುಗಳಿಗೂ ಪ್ರೇರಕನಾದವನು ಮಹೇಶ್ವರ.

1. ಹಿಂದಿನ ಶ್ಲೋಕದಲ್ಲಿ ಹೇಳಿದ ಆತ್ಮಜ್ಞಾನಿಯೇ ಈ ಪರಮೇಶ್ವರನೆಂದು ತಿಳಿಯಬೇಕು.

नावार्थी तु भवेत्तावद्यावत्पारं न गच्छति ।
उत्तीर्णे तु सरित्पारे नावया किं प्रयोजनम् ॥ १९ ॥

ಆತ್ಮಸಾಕ್ಷಾತ್ಕಾರವಾದ ಮೇಲೆ ಹಿಂದೆ ಮಾಡಿದ ಯಾವ ಪ್ರಯತ್ನವನ್ನೂ ಮತ್ತೆ ಮಾಡಬೇಕಾಗಿಲ್ಲ –

ಎಲ್ಲಿಯ ವರೆಗೆ ನದಿಯ ಆಚೆಯ ತೀರವನ್ನು ಮುಟ್ಟುವುದಿಲ್ಲವೋ ಅಲ್ಲಿಯ ವರೆಗೆ ದೋಣಿಯನ್ನು ಮನುಷ್ಯನು ಬಯಸುತ್ತಾನೆ. ನದಿಯನ್ನು ದಾಟಿ ಆಚೆಯ ತೀರವನ್ನು ಸೇರಿದ ಮೇಲೆ ದೋಣಿಯಿಂದೇನು ಪ್ರಯೋಜನ ?

ಹಾಗೆಯೇ ಆತ್ಮಸಾಕ್ಷಾತ್ಕಾರವಾದ ಮೇಲೆ ಯಾವ ಯೋಗವೂ ಬೇಡ. ಗುರುವೂ ಬೇಡ. ನಾವಯಾ = ನೌಕಯಾ ಎಂದು ಶುದ್ಧ ಪಾಠವಿರಬಹುದು.

ग्रन्थमभ्यस्य मेधावी ज्ञानविज्ञानतत्परः ।
पलालमिव धान्यार्थी त्यजेद्ग्रन्थमशेषतः ॥ २० ॥

ಬುದ್ಧಿವಂತನಾದವನು ವೇದಾಂತ ಗ್ರಂಥಗಳನ್ನು ಅಭ್ಯಾಸಮಾಡಿ ಆತ್ಮಜ್ಞಾನವನ್ನೂ ಸಾಕ್ಷಾತ್ಕಾರವನ್ನೂ ಪಡೆದ ಮೇಲೆ ವೇದಾಂತ ಶಾಸ್ತ್ರಗ್ರಂಥಗಳನ್ನು ತೊರೆದು ಬಿಡುತ್ತಾನೆ. ಧಾನ್ಯಾರ್ಥಿಯಾದವನು ಧಾನ್ಯವನ್ನು ಪಡೆದುಕೊಂಡ ಮೇಲೆ ಅದರ ಹೊಟ್ಟನ್ನು ಹೇಗೆ ತ್ಯಜಿಸುತ್ತಾನೋ ಹಾಗೆಯೇ ಎಲ್ಲ ಗ್ರಂಥಗಳನ್ನು ತ್ಯಜಿಸಿ ಬಿಡಬೇಕು.

उल्काहस्तो यथाकालं द्रव्यमालोक्य तां त्यजेत् ।
ज्ञानेन ज्ञेयमालोक्य ज्ञानं पश्चात्परित्यजेत् ॥ २१ ॥

ಕತ್ತಲೆಯಲ್ಲಿರುವ ಒಂದು ವಸ್ತುವನ್ನು ಹುಡುಕತಕ್ಕವನು ಕೈಯಲ್ಲಿ ಪಂಜನ್ನು ಹಿಡಿದು ಹುಡುಕುತ್ತಾನೆ. ಹುಡುಕುವ ವಸ್ತುವನ್ನು ಕಂಡಮೇಲೆ ಆ ಪಂಜನ್ನು ಹೇಗೆ ತ್ಯಜಿಸಿಬಿಡುತ್ತಾನೋ ಹಾಗೆ ಜ್ಞಾನಸಾಧನವಾದ ಭಕ್ತಿಮಾರ್ಗ ಮುಂತಾದ್ದರಿಂದ ಜ್ಞೇಯವನ್ನು – ಬ್ರಹ್ಮವನ್ನು ಸಾಕ್ಷಾತ್ಕರಿಸಿದ ಮೇಲೆ ಭಕ್ತಿಮಾರ್ಗಾದಿ ಜ್ಞಾನಸಾಧನವನ್ನು ತ್ಯಜಿಸಿಬಿಡಬೇಕು.

यथाऽमृतेन तृप्तस्य पयसा किं प्रयोजनम् ।
एवं तं परमं ज्ञात्वा वेदैर्नास्ति प्रयोजनम् ॥ २२ ॥

ಕ್ಷೀರಸಾಗರವನ್ನು ಕಡೆದಾಗ ಹುಟ್ಟಿದ ಅಮೃತವನ್ನು ಕುಡಿದು ತೃಪ್ತನಾದವನಿಗೆ ನೀರಿನಿಂದ ಏನು ಪ್ರಯೋಜನ ? ಹೀಗೆಯೇ ವೇದಾಂತ ಶಾಸ್ತ್ರಾದಿಗಳಿಂದ ಆ ಪರಮಾತ್ಮನನ್ನು ತಿಳಿದಮೇಲೆ ವೇದಶಾಸ್ತ್ರಾದಿಗಳಿಂದ ಯಾವ ಪ್ರಯೋಜನವೂ ಇಲ್ಲ.

ज्ञानामृतेन तृप्तस्य कृतकृत्यस्य योगिनः ।
न चास्ति किंचित् कर्तव्यमस्ति चेन्न स तत्त्ववित् ॥ २३ ॥

ಜ್ಞಾನಾಮೃತದಿಂದ ತೃಪ್ತನಾಗಿ ಕೇವಲ ಆನಂದಸ್ವರೂಪನೂ, ಧನ್ಯನೂ ಆದ ಯೋಗಿಗೆ ಮಾಡಬೇಕಾದ ಯಾವ ಕರ್ತವ್ಯವೂ ಇರುವುದಿಲ್ಲ. ಇರುವುದಾದರೆ ಆತನು ತತ್ತ್ವಜ್ಞಾನಿಯೇ ಅಲ್ಲ.

तैलधारामिवाच्छिन्नं दीर्घघण्टानिनादवत् ।
अवाच्यं प्रणवस्याग्रं यस्तं वेद स वेदवित् ॥ २४ ॥

ತೈಲಧಾರೆಯು ಹೇಗೆ ವಿಚ್ಛಿನ್ನವಾಗುವುದಿಲ್ಲವೋ ಹಾಗೆ ಮತ್ತು ದೀರ್ಘವಾದ ಘಂಟಾನಾದವು ವಿಚ್ಛೇದವಿಲ್ಲದೇ ಕೇಳಿಬರುವಂತೆಯೂ ಯಾವಾತನು ವಾಙ್ಮನಸ್ಸುಗಳಿಗೆ ಅಗೋಚರವೂ ಪ್ರಣವದ ಅಗ್ರಭಾಗವಾಗಿ, ಬಿಂದುನಾದ ಕಲಾತ್ಮಕವೂ ಸಕಲವೇದ ಸಾರಭೂತವೂ ಆದ ಬ್ರಹ್ಮವನ್ನೇ ಧ್ಯಾನಿಸುತ್ತಿರುವನೋ ಆತನೇ ವೇದಜ್ಞ, ಇನ್ನೊಬ್ಬನಿಲ್ಲ.

ವೇದಗಳಿಗೆ ತಾತ್ಪರ್ಯಗೋಚರನಾದ ಪರಮಾತ್ಮನ ಜ್ಞಾನದಿಂದಲೇ ಒಬ್ಬನನ್ನು ವೇದಜ್ಞನೆಂದು ಹೇಳಬೇಕು. ಬರಿಯ ವೇದಾಧ್ಯಯನ ಮಾಡಿದವನು ವೇದಜ್ಞನಲ್ಲ –

आत्मानमरणिं कृत्वा प्रणवं चोत्तरारणिम् ।
ध्यान निर्मथनाभ्यासात् देवं पश्येन्निगुढवत् ॥ २५ ॥

ತಾನು ಕರ್ತಾ ಭೋಕ್ತಾ ಎಂದು ಅಧ್ಯಾಸದಿಂದ ತಿಳಿದಿರುವವನು ತನ್ನನ್ನು ಅಧರಾರಣಿಯನ್ನಾಗಿ ಭಾವಿಸಿಕೊಂಡು ಓಂಕಾರವನ್ನು ಉತ್ತರಾರಣಿಯನ್ನಾಗಿ ಕಲ್ಪಿಸಿಕೊಂಡು ಧ್ಯಾನವೆಂಬ ಮಥನವನ್ನು ಮತ್ತೆ ಮತ್ತೆ ಮಾಡುತ್ತಿರಬೇಕು. ಹೀಗೆ ಮಾಡುತ್ತಾ ನಿಗೂಢನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು.

ವಿವರಣೆ: ಯಜ್ಞದಲ್ಲಿ ಅಗ್ನಿಗಾಗಿ ಯಾಜಕರು ಅರಣಿಯನ್ನು ಮಥಿಸುತ್ತಾರೆ. ಕೆಳಗಿರಿಸುವ ಮರದ ಒಂದು ಪಾತ್ರೆಗೆ ಅಧರಾರಣಿ ಎಂದು ಹೆಸರು. ಕಡಗೋಲಿನಂತಿರುವ ಇನ್ನೊಂದು ಸಾಧನಕ್ಕೆ ಉತ್ತರಾರಣಿ ಎಂದು ಹೆಸರು. ಉತ್ತರಾರಣಿಯನ್ನು ಕಡೆಯುತ್ತಿದ್ದರೆ ಬೆಂಕಿಯ ಕಿಡಿ ಸಿಡಿಯುತ್ತದೆ. ಬೆಂಕಿಯು ಅರಣಿಗಳಲ್ಲಿ ಗೂಢವಾಗಿ ಅಡಗಿರುತ್ತದೆ. ಹಾಗೆಯೇ ಜೀವನು ಪ್ರಣವದ ಅರ್ಥವನ್ನು ಧ್ಯಾನಿಸುತ್ತಿದ್ದರೆ ಗೂಢವಾದ ಬ್ರಹ್ಮಜ್ಞಾನವು ಪ್ರಾಪ್ತವಾಗುವುದೆಂದು ತಾತ್ಪರ್ಯ.

तादृशं परमं रूपं स्मरेत् पार्थह्यनन्य धी : ।
विधूमाग्निनिभं देवं पश्येदन्यन्तनिर्मलम् ॥ २६ ॥

ಹೇ ಪಾರ್ಥ, ಧೂಮವಿಲ್ಲದ ಅಗ್ನಿಯಂತೆ ಅತ್ಯಂತ ನಿರ್ಮಲನೂ, ಪರಮೋತ್ಕೃಷ್ಟನೂ ಆದ ಪರಮಾತ್ಮನ ರೂಪವನ್ನು ಕಾಣುವವರೆಗೂ ಅನ್ಯಮನಸ್ಕನಾಗದೆ ಆ ರೀತಿಯಲ್ಲಿರುವ ಬ್ರಹ್ಮವನ್ನೇ ಧ್ಯಾನಿಸುತ್ತಿರಬೇಕು.

दूरस्थोऽपि न दूरस्थ: पिण्डस्थ: पिण्डवर्जित: ।
विमल: सर्वदा देही सर्वव्यापी निरञ्जन: ॥ २७ ॥

ಆ ಪರಮಾತ್ಮನು ದೂರದಲ್ಲಿರತಕ್ಕವನಾದರೂ ದೂರದಲ್ಲಿಲ್ಲ. ದೇಹದಲ್ಲಿರತಕ್ಕವನಾದರೂ ದೇಹದ ಸಂಬಂಧವಿಲ್ಲದವನು. ಆತನು ಸರ್ವದಾ ಅತ್ಯಂತ ಪರಿಶುದ್ಧನೂ ಸರ್ವವ್ಯಾಪಿಯೂ ಸ್ವಯಂಪ್ರಕಾಶನೂ ಆಗಿದ್ದಾನೆ.

1. ದೂರಸ್ಥಃ = ಅಜ್ಞರಿಗೆ ಕಾಣುವುದಿಲ್ಲವಾದ್ದರಿಂದ ದೂರಸ್ಥ. ವಸ್ತುತಃ ಹೃದಯದಲ್ಲೇ ಇರತಕ್ಕವನು, ಸರ್ವತ್ರ ಇರತಕ್ಕವನು.
2. ಪಿಂಡ = ದೇಹ.

कायस्थोऽपि न कायस्थ: कायस्थोऽपि न जायते ।
कायस्थोऽपि न भुञ्जान: कायस्थोऽपि न बध्यते ।
कायस्थोऽपि न लिप्त: स्यात् कायस्थोऽपि न बाध्यते ॥ २८ ॥

ದೇಹವೇ ಆತ್ಮವೆಂದು ಅಧ್ಯಾಸದಿಂದ ಜನರು ತಿಳಿದಿರುತ್ತಾರೆ. ಆಗ ಆತ್ಮನು ಕರ್ತೃ, ಭೋಕ್ತೃ ಎಂದು ತಿಳಿದಿರುತ್ತಾರೆ. ವಸ್ತುತಃ ಕರ್ತೃತ್ವ ಭೋಕ್ತೃತ್ವಗಳು ಆತ್ಮನಲ್ಲಿಲ್ಲ ಎಂದು ಹೇಳಲಾಗುವುದು–

ದೇಹಿಯಾದ ಜೀವನು ದೇಹದಲ್ಲಿದ್ದರೂ ಎಂದರೆ ಅಧ್ಯಾಸದಿಂದ ಹಾಗೆ ತಿಳಿದಿದ್ದರೂ ವಸ್ತುತಃ ದೇಹಸ್ಥನಲ್ಲ. ಎಂದರೆ ಶರೀರಸಂಬಂಧಿಯಾದ ಯಾವ ಧರ್ಮವೂ ಅವನಿಗೆ ಅಂಟುವುದಿಲ್ಲ ಎಂದರ್ಥ. ದೇಹಸ್ಥನಾದರೂ ದೇಹದಂತೆ ಹುಟ್ಟುವುದಿಲ್ಲ. ದೇಹದಲ್ಲಿದ್ದರೂ ಊಟಮಾಡತಕ್ಕವನಲ್ಲ ಎಂದರೆ ಭೋಗಿಸತಕ್ಕವನಲ್ಲ. ದೇಹದಲ್ಲಿದ್ದರೂ ಬಂಧನಕ್ಕೆ ಒಳಗಾಗತಕ್ಕವನಲ್ಲ, ದೇಹಸ್ಥನಾದರೂ ಸುಖ-ದುಃಖ ಕಶ್ಮಲಾದಿಗಳಿಂದ ಲಿಪ್ತನಲ್ಲ. ದೇಹಸ್ಥನಾದರೂ ಮರಣಹೊಂದುವುದಿಲ್ಲ. ಆದ್ದರಿಂದ ಷಡ್‌ಭಾವವಿಕಾರಗಳು ಅವನಿಗಿಲ್ಲ ಎಂದು ಅಭಿಪ್ರಾಯ.

तिलमध्ये यथा तैलं क्षीरमध्ये यथा घृतम् ।
पुष्पमध्ये यथा गन्धः फलमध्ये यथा रसः ॥ २९ ॥
काष्ठाग्निवत्प्रकाशेत आकाशे वायुवच्चरेत् ॥ ३० ॥

ಎಳ್ಳಿನ ಮಧ್ಯದಲ್ಲಿ ಎಣ್ಣೆಯಿರುವಂತೆಯೂ ಹಾಲಿನಲ್ಲಿ ತುಪ್ಪವಿರುವಂತೆಯೂ ಹೂವಿನಲ್ಲಿ ಸುಗಂಧವಿರುವಂತೆಯೂ ಹಣ್ಣಿನಲ್ಲಿ ರಸವಿರುವಂತೆಯೂ ಕಟ್ಟಿಗೆಯಲ್ಲಿ ಬೆಂಕಿಯಿರುವಂತೆಯೂ ಆತ್ಮನು ದೇಹದಲ್ಲಿ ಇರುತ್ತಾನೆ. ಆಕಾಶದಲ್ಲಿ ವಾಯುವಿನಂತೆ ಸರ್ವಗತನಾಗಿರುತ್ತಾನೆ.

ವಿವರಣೆ: ಎಳ್ಳನ್ನು ಗಾಣಕ್ಕೆ ಕೊಟ್ಟು ಎಣ್ಣೆಯನ್ನು ತೆಗೆಯುವಂತೆ ಶರೀರಕ್ಕೆ ಶ್ರಮವನ್ನಿಟ್ಟು ಆತ್ಮವನ್ನು ತಿಳಿಯಬೇಕು. ಹಾಲನ್ನು ಕಾಯಿಸಿ ಹೆಪ್ಪು ಹಾಕಿ ಮೊಸರು ಮಾಡಿ ಕಡೆದು ಬೆಣ್ಣೆ ತೆಗೆದು ಕಾಯಿಸಿ ತುಪ್ಪವನ್ನು ಸಂಪಾದಿಸುವಂತೆ ಬಹುಶ್ರಮದಿಂದ ಆತ್ಮನನ್ನು ತಿಳಿಯಬೇಕಾಗಿದೆ. ಹೂವಿನಲ್ಲಿ ಗಂಧವಿದ್ದರೆ ಹೂವು ಸೊಗಸುತ್ತದೆ. ಹಾಗೆ ದೇಹದಲ್ಲಿ ಆತ್ಮನಿದ್ದರೆ ದೇಹವು ಸೊಗಸುತ್ತದೆ. ಹೀಗೆ ಹೋಲಿಕೆಯಿಂದ ಆತ್ಮನ ಒಂದೊಂದು ವೈಶಿಷ್ಟ್ಯವನ್ನೂ ಊಹಿಸಿಕೊಳ್ಳಬೇಕು.

तथा सर्वगतो देही देहमध्ये व्यवस्थितः ॥ ३१ ॥

ಮೇಲೆ ಹೇಳಿದ ಎಣ್ಣೆ ತುಪ್ಪ ಮೊದಲಾದವುಗಳು ಎಳ್ಳು ಮೊದಲಾದವುಗಳಲ್ಲಿ ಇರುವಂತೆ ಆತ್ಮನು ದೇಹದಲ್ಲಿದ್ದಾನೆ.

मनस्थं मनमध्यस्थं मध्यस्थं मनवर्जितम् ।
मनसा मन आलोक्य स्वयं सिध्यन्ति योगिनः ॥ ३२ ॥

ಹೀಗೆಯೇ ದೇಹಿಗಳ ಮನಸ್ಸಿನ ಮಧ್ಯದಲ್ಲಿ ಪರಮಾತ್ಮನು ನೆಲೆಸಿರುತ್ತಾನೆ. ಆ ಬ್ರಹ್ಮವು ಅಪರೋಕ್ಷವೆಂದು ಹೇಳಲಾಗುವುದು–

ಮನಸ್ಥಂ = ಮನಸ್ಸಿನ ಉಪಾಧಿಯುಳ್ಳದ್ದು, ಮನಮಧ್ಯಸ್ಥಂ = ಮನಸ್ಸಿನ ಮಧ್ಯದಲ್ಲಿ ಇರತಕ್ಕದ್ದು ಎಂದರೆ ಮನಸ್ಸಿಗೆ ಸಾಕ್ಷಿಯಾದದ್ದು, ಮಧ್ಯಸ್ಥಂ = ಸಕಲ ವಸ್ತುಗಳಿಗೂ ಸಾಕ್ಷಿಯಾದದ್ದು, ಮನವರ್ಜಿತಂ = ಸಂಕಲ್ಪ ವಿಕಲ್ಪಾದಿಗಳಿಂದ ರಹಿತವಾದದ್ದು.

ಮನಸಾ=ಪರಿಶುದ್ಧವಾದ ಅಂತಃಕರಣದಿಂದ ಮನಃ ಆಲೋಕ್ಯ = ಜ್ಞಾನಸ್ವರೂಪನಾದ ಆತ್ಮನನ್ನು ಅಪರೋಕ್ಷ ಜ್ಞಾನಕ್ಕೆ ಗೋಚರನನ್ನಾಗಿ ಮಾಡಿಕೊಂಡು ಯೋಗಿಗಳು ಸಿದ್ಧಿಯನ್ನೈದುತ್ತಾರೆ ಎಂದರೆ ಮುಕ್ತರಾಗುತ್ತಾರೆ ಎಂದರ್ಥ.

ಟಿಪ್ಪಣಿ: ಶ್ಲೋಕದಲ್ಲಿ ಅಕಾರಾಂತವಾಗಿ ಮನ ಶಬ್ದವನ್ನು ಪ್ರಯೋಗಿಸಿರುವುದು ಆರ್ಷ.

आकाशं मानसं कृत्वा मन: कृत्वा निरास्पदम् ।
निश्चलत्वं विजानीयात्समाधिस्थस्य लक्षणम् ॥ ३३ ॥

ಮನಸ್ಸನ್ನು ಆಕಾಶದಂತೆ ನಿರ್ಮಲವನ್ನಾಗಿ ಮಾಡಿ ಮನಸ್ಸಿಗೆ ಆಗುವ ಸಂಕಲ್ಪ ವಿಕಲ್ಪಾದಿಗಳನ್ನೆಲ್ಲಾ ತೊರೆದು ನಿರ್ವಿಷಯವನ್ನಾಗಿ ಮಾಡಿ ಪರಮಾತ್ಮನು ನಿಷ್ಕ್ರಿಯನೆಂಬುದನ್ನು ಯಾವನು ತಿಳಿಯುತ್ತಾನೋ ಅವನೇ ಸಮಾಧಿಸ್ಥನು. ಇದು ಆತನ ಲಕ್ಷಣ.

योगामृतरसं पीत्वा वायुभक्ष: सदा सुखी ।
यममभ्यसते नित्यं समाधिर्मृत्युनाशक: ॥ ३४ ॥

ಹೀಗೆ ಆರೂಢನ ಲಕ್ಷಣವನ್ನು ಹೇಳಿದ್ದಾಯಿತು. ಈಗ ಆರುರುಕ್ಷುವಾಗಲು ಉಪಾಯವನ್ನು ಹೇಳಲಾಗುವುದು–

ಯಮನಿಯಮಾದಿ ಅಷ್ಟಾಂಗಯೋಗವೆಂಬ ಅಮೃತರಸವನ್ನು ಕುಡಿದು ವಾಯು ಮಾತ್ರ ಭಕ್ಷಕನಾಗಿ ಎಂದರೆ ನಿರಾಹಾರನಾಗಿ ನಿತ್ಯವೂ ಯೋಗಶಾಸ್ತ್ರವನ್ನು ಅಭ್ಯಾಸ ಮಾಡಬೇಕು ಎಂದರೆ ಮನೋನಿಗ್ರಹವನ್ನು ಅಭ್ಯಾಸಮಾಡಬೇಕು ಎಂದರ್ಥ. ಹೀಗಿರುವುದಕ್ಕೆ ಸಮಾಧಿ ಎಂದೂ ಹೆಸರಿದೆ. ಇದು ಜನನ ಮರಣಗಳನ್ನು ನಾಶಮಾಡುತ್ತದೆ.

ऊर्ध्वशून्यमध: शून्यं मध्यशून्यं यदात्मकम् ।
सर्वशून्यं स आत्मेति समाधिस्थस्य लक्षणम् ॥ ३५ ॥

ಯಾವುದಕ್ಕೆ ಊರ್ಧ್ವದೇಶವಿಲ್ಲವೋ ಅಧೋದೇಶವೂ ಇಲ್ಲವೋ ಮಧ್ಯದೇಶವೂ ಇಲ್ಲವೋ ಹೀಗೆ ಸರ್ವಶೂನ್ಯವಾದದ್ದು ಯಾವುದೋ ಅದೇ ಆತ್ಮ ಎಂದು ಭಾವಿಸುವುದು ಸಮಾಧಿಸ್ಥನ ಲಕ್ಷಣವಾಗಿದೆ.

ಸರ್ವಶೂನ್ಯ = ದೇಶಕಾಲಾದಿ ಪರಿಚ್ಛೇದರಹಿತ.

शून्यभावितभावात्मा पुण्यपापैः प्रमुच्यते ॥ ३६ ॥

ಈ ಪ್ರಕಾರವಾಗಿ ಆತ್ಮವು ಸರ್ವಶೂನ್ಯವಾದ ವಸ್ತುವೇ ಸರಿ ಎಂದು ಯಾವಾತನು ತಿಳಿದಿದ್ದಾನೋ ಅವನಿಗೆ ಯಾವುದೇ ವಿಧಿನಿಷೇಧಗಳಿಲ್ಲವಾದ್ದರಿಂದ ಪುಣ್ಯಪಾಪಗಳೂ ಇರುವುದಿಲ್ಲ.

अर्जुन उवाच –

अदृश्ये भावना नास्ति दृश्यमेतद्विनश्यति ।
अवर्णमस्वरं ब्रह्म कथं ध्यायन्ति योगिनः ॥ ३७ ॥

ಅರ್ಜುನ ಉವಾಚ–

ಹೇ ಭಗವನ್ ! ಜ್ಞಾನಕ್ಕೆ ಗೋಚರವಲ್ಲದ ವಸ್ತುವನ್ನು ಧ್ಯಾನಿಸಲು ಆಗುವುದಿಲ್ಲ. ದೃಶ್ಯವಾದ ಎಲ್ಲ ವಸ್ತುಗಳೂ ನಾಶವಾಗುತ್ತವೆ. ಆತ್ಮವು (ಬ್ರಹ್ಮವು) ಶಬ್ದಕ್ಕೆ ಅಗೋಚರ. ಅದಕ್ಕೆ ಯಾವ ಬಣ್ಣವೂ ಇಲ್ಲ. ಯಾವ ರೂಪವೂ ಇಲ್ಲ. ಹೀಗಿರುವಾಗ ಯೋಗಿಗಳು ಅದನ್ನು ಹೇಗೆ ಧ್ಯಾನಿಸುತ್ತಾರೆ ?

श्रीभगवानुवाच –

ऊर्ध्वपूर्णमधःपूर्णं मध्यपूर्णं यदात्मकम् ।
सर्वपूर्णं स आत्मेति समाधिस्थस्य लक्षणम् ॥ ३८ ॥

ಅವಯವವಿಶಿಷ್ಟವೂ ಗುಣವಿಶಿಷ್ಟವೂ ಆದ ಮೂರ್ತಿಯನ್ನು ಜನರು ಧ್ಯಾನಿಸಬಲ್ಲರು ಎಂಬುದು ನಿಜ. ಆದರೆ ವೇದಾಂತಾಭ್ಯಾಸದಿಂದ ಯಾರ ಮನಸ್ಸು ಸಂಸ್ಕಾರ ಹೊಂದಿದೆಯೋ ಅಂತಹವರು ನಿರ್ಮಲವೂ ನಿಷ್ಕಲವೂ ಆದ ಬ್ರಹ್ಮವನ್ನು ಮನೋವೃತ್ತಿಯಿಂದ ಧ್ಯಾನಿಸಬಲ್ಲರು ಎಂದು ಭಗವಂತನು ಹೀಗೆ ಹೇಳುತ್ತಾನೆ–

ಯಾವುದು ಊರ್ಧ್ವಭಾಗ ಅಧೋಭಾಗ ಮಧ್ಯಭಾಗಗಳಲ್ಲಿಯೂ ತುಂಬಿಕೊಂಡು ಸರ್ವಪೂರ್ಣವಾಗಿದೆಯೋ ಅದು ಆತ್ಮವೆಂದು ಸಂಸ್ಕೃತಬುದ್ಧಿಯುಳ್ಳವರು ಧ್ಯಾನಿಸುತ್ತಾರೆ. ಇದು ಸಮಾಧಿಸ್ಥನ ಲಕ್ಷಣ. (ಇದೇ ನಿರ್ವಿಕಲ್ಪಕ ಸಮಾಧಿ)

अर्जुन उवाच –

सालम्बस्याप्यनित्यत्वं निरालम्बस्य शून्यता ।
उभयोरपि दोषत्वात्कथं ध्यायन्ति योगिनः ॥ ३९ ॥

ಅರ್ಜುನ ಉವಾಚ–

ಧ್ಯಾನಿಸುವಾಗ ಮೂರ್ತಿಯ ಕಲ್ಪನೆಯಿದ್ದರೆ ಮೂರ್ತಿಯು ವಿನಾಶಿಯಾಗುತ್ತದೆ. ಅದು ಬ್ರಹ್ಮವಲ್ಲ. ಮೂರ್ತಿಯಿಲ್ಲದಿದ್ದರೆ ಅದು ಬರಿಯ ಶೂನ್ಯವೇ ಆಗಿ ಬಿಡುತ್ತದೆ. ಉಭಯ ಪಕ್ಷಗಳಲ್ಲಿಯೂ ದೋಷವಿರುವುದರಿಂದ ಯೋಗಿಗಳು ಧ್ಯಾನಿಸುವುದಾದರೂ ಹೇಗೆ ?

श्रीभगवानुवाच –

हृदयं निर्मलं कृत्वा चिन्तयित्वाप्यनामयम् ।
अहमेव इदं सर्वमिति पश्येत्परं सुखी ॥ ४० ॥

ಶ್ರೀ ಭಗವಾನ್ ಉವಾಚ–

ಯೋಗಿಯಾದವನು ಮನಸ್ಸನ್ನು ಕಾಮಕ್ರೋಧಾದಿ ದೋಷರಹಿತವಾಗಿ ಮಾಡಿಕೊಂಡು ಬ್ರಹ್ಮವು ಸರ್ವದೋಷವಿಮುಕ್ತವೆಂದು ಭಾವಿಸಿಕೊಂಡು, ಈ ಸಮಸ್ತ ಜಗತ್ತೂ ನಾನೇ ಆಗಿದ್ದೇನೆ, ನಾನೇ ಪರಬ್ರಹ್ಮ ಎಂದು ಸುಖವಾಗಿ ಭಾವಿಸಬಹುದು.

ಟಿಪ್ಪಣಿ : ದೇಹಾದಿಗಳು ನಾನಲ್ಲ ಎಂಬುದು ವೇದಾಂತಾಭ್ಯಾಸಿಗೆ ತಿಳಿದಿರುತ್ತದೆ. ದೇಹಾತಿರಿಕ್ತನು ನಾನು ಎಂಬುದು ನಿಶ್ಚಿತವಾಗಿರುತ್ತದೆ. ಅಂತಹ ಅಹಂ ಪದಾರ್ಥಕ್ಕೆ ಯಾವ ರೂಪವೂ ಇಲ್ಲ. ಗುಣವೂ ಇಲ್ಲ. ಅಂತಹ ನಾನು ಇದ್ದೇನೆ ಎಂಬುದರಲ್ಲಿ ಸಂದೇಹವೂ ಇಲ್ಲ. ಆಗ ನಾನೇ ಬ್ರಹ್ಮ ಎಂಬ ಧ್ಯಾನವು ಅವಶ್ಯವಾಗಿ ಮಾಡಲು ಬರುತ್ತದೆ ಎಂದು ಭಗವಂತನ ಅಭಿಪ್ರಾಯ.

अर्जुन उवाच –

अक्षराणि समात्राणि सर्वे बिन्दुसमाश्रिताः ।
बिन्दुर्भिद्यति नादेन स नादः केन भिद्यते ॥ ४१ ॥

ಇದುವರೆಗೆ ಭಗವಂತನು ಹೇಳಿದ್ದೇನೆಂದರೆ – ಅರ್ಥರೂಪವಾದ ಈ ಜಗತ್ತು ಅದಕ್ಕೆ ಅಭಿನ್ನವಾದ ಶಬ್ದದಿಂದ ಬೋಧ್ಯವಾಗುತ್ತದೆ. ಶಬ್ದವು ವರ್ಣಸ್ವರೂಪವಾದದ್ದು. ವರ್ಣಗಳು ಪ್ರಣವಸ್ವರೂಪವಾದವು. ಪ್ರಣವವು

ಮಕಾರಬೋಧ್ಯವಾದ ಬಿಂದು (ಅನುಸ್ವಾರ) ಸ್ವರೂಪವಾಗಿದೆ. ಬಿಂದುವು ನಾದಸ್ವರೂಪವಾಗಿದೆ. ನಾದವು ಬ್ರಹ್ಮಧ್ಯಾನಕ್ಕೆ ಸ್ಥಾನವಾಗಿದೆ. ಆ ಸ್ಥಾನವು ನಾದದ ಏಕದೇಶವಾದ ಕಲಾಸ್ವರೂಪವಾಗಿದೆ. ಈ ಕಲೆಯು ಬ್ರಹ್ಮದಲ್ಲಿ ಸೇರಿಕೊಳ್ಳತಕ್ಕದ್ದು. ಅಲ್ಲಿಗೆ ಬ್ರಹ್ಮವು ಬಿಂದು ನಾದ ಕಲಾತೀತವೆಂದಾಯಿತು. ಇದರ ಸ್ಪಷ್ಟತೆಗಾಗಿ ಅರ್ಜುನನು ಕೇಳುತ್ತಾನೆ.

ಅರ್ಜುನ ಉವಾಚ–

ಹೇ ಭಗವನ್ ! ಪ್ರಣವದ ಎಲ್ಲ ಅಕ್ಷರಗಳೂ ಬಿಂದುವಿನಲ್ಲಿ ಸೇರಿಹೋಗುತ್ತವೆ. ಬಿಂದುವು (ಅನುಸ್ವಾರವು) ನಾದದಲ್ಲಿಯೂ ನಾದವು ಕಲೆಯಲ್ಲಿಯೂ ಸಮನ್ವಯಗೊಳ್ಳುತ್ತದೆ. ಆ ಕಲೆಯು ಎಲ್ಲಿ ಸಮನ್ವಿತವಾಗುತ್ತದೆ ?

ಟಿಪ್ಪಣಿ: ಶ್ಲೋಕದಲ್ಲಿ ನಾದಕ್ಕೆ ಸಮನ್ವಯ ಎಲ್ಲಿ ? ಎಂಬ ಪ್ರಶ್ನೆಯಿದ್ದರೂ ಕಲೆಗೆ ಎಲ್ಲಿ ಸಮನ್ವಯ ? ಎಂಬಲ್ಲಿಯ ವರೆಗೆ ಅರ್ಜುನನ ಪ್ರಶ್ನೆ ಎಂದು ತಿಳಿಯಬೇಕು. ಏಕೆಂದರೆ ನಾದದ ಮುಂದಿನದು ಕಲೆಯಾದ್ದರಿಂದ ನಾದವು ಕಲೆಯಲ್ಲಿ ಸಮನ್ವಯವಾಗುತ್ತದೆಂಬುದು ಪ್ರಸಿದ್ಧವಾಗಿದೆ.

श्रीभगवानुवाच –

अनाहतस्य शब्दस्य तस्य शब्दस्य यो ध्वनि: ।
ध्वनिरन्तर्गतं ज्योतिर्ज्योतिरन्तर्गतं मन: ॥ ४२ ॥
तन्मनो विलयं याति तद्विष्णो: परमं पदम् ॥

ಶ್ರೀ ಭಗವಾನ್ ಉವಾಚ–

ಪರಾವಾಗವಸ್ಥೆಯನ್ನು ಹೊಂದಿದ ಪ್ರಣವದ ಧ್ವನಿಯೇ ನಾದವೆನಿಸುತ್ತದೆ. ಇದೇ ಅನಾಹತ ಶಬ್ದ. ಈ ಅನಾಹತ ಶಬ್ದದ ಅಂಶವಾದ ಧ್ವನಿಯೇ ಕಲಾ ಎನಿಸುತ್ತದೆ. ಇದು ಜ್ಯೋತಿಸ್ವರೂಪವಾದದ್ದು. ಇದರಲ್ಲಿ ಲೀನವಾದದ್ದು ಮನಸ್ಸು. ಇಂತಹ ಮನಸ್ಸು ಎಲ್ಲಿ ಲೀನವಾಗುತ್ತದೆಯೋ ಅದೇ ವಿಷ್ಣುವಿನ ಪರಮ ಸ್ವರೂಪ.

ಟಿಪ್ಪಣಿ : ಕಲೆಯೇ ಜ್ಯೋತಿ ಅದಕ್ಕೆ ಬೇರೆ ಅಂಶವಿಲ್ಲ. ಮನಸ್ಸು ಆ ಜ್ಯೋತಿಯಲ್ಲಿ ನಿಲ್ಲಬೇಕು. ಆಗ ಮನಸ್ಸಿಗೆ ಗೋಚರನಾಗತಕ್ಕವನು ಪರಮಾತ್ಮ, ಏವಂ ಚ ಪರಮಾತ್ಮನು ಕಲೆಗೆ ಅತೀತನಾದವನು, ಕಲೆಗೆ ಇನ್ನೊಂದು ಅಂಶವಿಲ್ಲ.

ओङ्कारध्वनिनादेन वायोः संहरणान्तिकम् ।
निरालम्बं समुद्दिश्य यत्र नादो लयं गतः ॥ ४३ ॥

ಓಂಕಾರೋಚ್ಚಾರಣಪೂರ್ವಕವಾಗಿ ಪ್ರಾಣಾಯಾಮವನ್ನು ಮಾಡತಕ್ಕದ್ದು. ಓಂಕಾರ ಧ್ವನಿರೂಪವಾದ ನಾದದೊಡನೆ ಬ್ರಹ್ಮವನ್ನು ಗುರಿಯಾಗಿರಿಸಿಕೊಂಡು ರೇಚಕ ಪೂರಕ ಸ್ತಂಭಕಗಳನ್ನು ಆಚರಿಸಿ ಕಡೆಯಲ್ಲಿ ಪ್ರಾಣಾಯಾಮದ ಸಂಹರಣರೂಪವಾದ ರೇಚಕವನ್ನು ಪುನಃ ಆಚರಿಸಬೇಕು. ಅಲ್ಲಿಯ ವರೆಗೂ ಧ್ಯಾನಗೋಚರವಾದ ಬ್ರಹ್ಮವು ಆ ಪ್ರಣವದ ನಾದವು ಮುಗಿಯುವಾಗ ನಿರಾಲಂಬವಾಗಿ ವಿಷ್ಣುವಿನ ಪರಮಪದವೆನಿಸುತ್ತದೆ.

ಟಿಪ್ಪಣಿ : ಪ್ರಾಣಾಯಾಮ ಕಾಲದಲ್ಲಿ ಬ್ರಹ್ಮವನ್ನು ಧ್ಯಾನಿಸುವಾಗ ಅದಕ್ಕೆ ಅಧಿಷ್ಠಾನವಾಗಿ ವಾಯು ಮತ್ತು ನಾದ ಇರುತ್ತದೆ. ಪ್ರಾಣಾಯಾಮವು ಮುಗಿದಾಗ ಆ ಬ್ರಹ್ಮವೇ ನಿರಧಿಷ್ಠಾನವಾಗುತ್ತದೆ. ಅದೇ ವಿಷ್ಣುವಿನ (ಬ್ರಹ್ಮದ) ನಿಜಸ್ವರೂಪ, ಬ್ರಹ್ಮವೇ ಸರ್ವಕ್ಕೂ ಅಧಿಷ್ಠಾನ.

अर्जुन उवाच –

भिन्ने पञ्चात्मके देहे गते पञ्चसु पञ्चधा ।
प्राणैर्विमुक्ते देहे तु धर्माधर्मौ क्व गच्छतः ॥ ४४ ॥

ಆರೂಢನು ಮುಕ್ತನಾಗುವುದರಿಂದ ಅವನು ಹಿಂದೆ ಮಾಡಿದ ಪುಣ್ಯ ಪಾಪಗಳೂ ಸಹ ನಶಿಸಿ ಹೋಗುತ್ತವೆ. ಆದರೆ ಆರುರುಕ್ಷುವಿಗೆ ಪುನರ್ಜನ್ಮವುಂಟು ಎಂದು ತಿಳಿದು ಅರ್ಜುನನು ಪುನಃ ಕೇಳುತ್ತಾನೆ–

ಅರ್ಜುನ ಉವಾಚ –

ಪಂಚಭೂತಾತ್ಮಕವಾದ ಸ್ಥೂಲ ಶರೀರವು ಆರುರುಕ್ಷುವು ಮೃತನಾದಮೇಲೆ ಪಂಚಭೂತಗಳಲ್ಲಿ ಸೇರಿಹೋಗುತ್ತದೆ. ಪ್ರಾಣಾದಿ ಪಂಚವಾಯುಗಳು ದೇಹದಿಂದ ನಿರ್ಗಮಿಸುತ್ತವೆ. ಆಗ ಆತನು ಮಾಡಿದ ಪುಣ್ಯಪಾಪಗಳು ಎಲ್ಲಿಗೆ ಹೋಗುತ್ತವೆ ?

श्रीभगवानुवाच –

धर्माधर्मौ मनश्चैव पञ्चभूतानि यानि च ।
इन्द्रियाणि च पञ्चैव याश्चान्या: पञ्च देवता: ॥ ४५ ॥
ताश्चैव मनसा सर्वे नित्यमेवाभिमानत: ।
जीवेन सह गछन्ति यावत्तत्त्वं न विन्दति ॥ ४६ ॥

ಶ್ರೀ ಭಗವಾನ್ ಉವಾಚ–

ಪುಣ್ಯಪಾಪಗಳು, ಮನಸ್ಸು, ಪಂಚ ಸೂಕ್ಷ್ಮ ಭೂತಗಳು, ಜ್ಞಾನೇಂದ್ರಿಯ, ಕರ್ಮೇಂದ್ರಿಯ ಪಂಚಕಗಳು ಮತ್ತು ಇಂದ್ರಿಯಗಳಿಗೆ (ಅಧಿಷ್ಠಾತೃ) ಅಭಿಮಾನಿಗಳಾದ ಪಂಚದೇವತೆಗಳು ಅಂತಃಕರಣಸಹಿತವಾಗಿ ಜೀವನ ಜೊತೆಗೇ ನಿರ್ಗಮಿಸುತ್ತವೆ. ಪರಮಾರ್ಥ ತತ್ತ್ವವನ್ನು ತಿಳಿದು ಆರೂಢನಾಗುವವರೆಗೂ ಹೀಗೆಯೇ ನಡೆಯುತ್ತದೆ.

अर्जुन उवाच –

स्थावरं जङ्गमं चैव यत्किंचित्सचराचरम् ।
जीवा जीवेन सिध्यन्ति स जीव: केन सिध्यति ॥ ४७ ॥

ಸ್ಥಾವರ ಜಂಗಮಾತ್ಮಕವಾದ ಈ ಚರಾಚರ ಸಹಿತವಾದ ಜಗತ್ತು ಎಂದರೆ ವಿಶ್ವರೂಪವನ್ನು ತಳೆದ ಎಲ್ಲ ಜೀವರೂ ಸ್ವಪ್ನದಲ್ಲಿ ತೈಜಸರಾಗಿ ಉನ್ನತಿಯನ್ನು ಪಡೆಯುತ್ತಾರೆ. ಈ ತೈಜಸನು ಸ್ವಾಭಿಮಾನವನ್ನು ತ್ಯಜಿಸಿ ಹೇಗೆ ಉನ್ನತಿಯನ್ನು ಪಡೆಯುವನು ?

श्रीभगवानुवाच –

मुखनासिकयोर्मध्ये प्राण: संचरते सदा ।
आकाश: पिबते प्राणं स जीव: केन जीवति ॥ ४८ ॥

ಅರ್ಜುನನು ಹೀಗೆ ಕೇಳಲಾಗಿ ತೈಜಸನು ಪ್ರಾಜ್ಞನಾಗುವನೆಂದೂ ಪ್ರಾಜ್ಞನು ತುರೀಯನಾಗುವನೆಂದೂ ಕೂಡ ಶ್ರೀಕೃಷ್ಣನು ಹೇಳುತ್ತಾನೆ–

ಶ್ರೀ ಭಗವಾನ್ ಉವಾಚ–

ಬಾಯಿ ಮತ್ತು ನಾಸಿಕಗಳ ರಂಧ್ರದಲ್ಲಿ ಸದಾ ಪ್ರಾಣವಾಯುವು ಸಂಚರಿಸುತ್ತದೆಯಷ್ಟೆ. ಒಂದು ದಿವಸಕ್ಕೆ ಇಪ್ಪತ್ತೊಂದು ಸಾವಿರದ ಆರುನೂರು ಸಲ (21,600) ಉಸಿರಾಟವು ನಡೆಯುತ್ತದೆ. ಯೋಗಿಯು ಇದನ್ನು ಅಜಪಾಜಪ

ಮಂತ್ರವನ್ನಾಗಿ ತಿಳಿದಿರುತ್ತಾನೆ. ಯಾವಾಗ ಯೋಗಿಯು ಯೋಗಾನುಷ್ಠಾನ ಮಹಿಮೆಯಿಂದ ಬ್ರಹ್ಮಜ್ಞಾನವನ್ನು ಪಡೆಯುತ್ತಾನೋ ಆಗ ಜೀವನಾದೃಷ್ಟದಿಂದ (ಪ್ರಾರಬ್ಧ ಕರ್ಮವಶದಿಂದ) ಇನ್ನೂ ಕೆಲವು ಕಾಲ ದೇಹವನ್ನು ಧರಿಸಿರಬಹುದು. ಅನಂತರ ಪ್ರಾಣವಾಯುವು ಆಕಾಶದಲ್ಲಿ ಲಯಿಸಿ ಹೋಗುವುದು. ಆಗ ಜೀವಿಸುವುದಾದರೂ ಹೇಗೆ ? ಜೀವಾತ್ಮನ ಜೀವಭಾವವೇ ತೊಲಗಿ ಹೋಗುತ್ತದೆ ಎಂದು ಅಭಿಪ್ರಾಯ.

अर्जुन उवाच –

ब्रह्माण्डव्यापितं व्योम व्योम्ना चावेष्टितं जगत् ।
अन्तर्बहिश्च तद्व्योम कथं देवो निरञ्जनः ॥ ४९ ॥

ಬ್ರಹ್ಮವು ಸರ್ವಗತವಾದ್ದರಿಂದ ಎಲ್ಲ ವಸ್ತುಗಳ ಸಂಬಂಧವೂ ಅದಕ್ಕಿರುತ್ತದೆ. ಅದು (ಬ್ರಹ್ಮನು) ನಿರಂಜನವೂ ನಿಷ್ಕಲವೂ ಆಗುವುದಾದರೂ ಹೇಗೆ ? ಎಂದು ಅರ್ಜುನನ ಪ್ರಶ್ನೆ.

ಅರ್ಜುನ ಉವಾಚ–

ಹೇ ಭಗವನ್ ! ಆಕಾಶವು ಬ್ರಹ್ಮಾಂಡದಿಂದ ಕೂಡಿದೆ. ಆಕಾಶದಿಂದ ಜಗತ್ತು ವ್ಯಾಪ್ತವಾಗಿದೆ. ಏವಂ ಚ ಬ್ರಹ್ಮಾಂಡದ ಒಳಗೂ ಹೊರಗೂ ಆಕಾಶವೇ ಇರುತ್ತದೆ. ಹೀಗಿರುವಾಗ ಬ್ರಹ್ಮವು ಸಂಗರಹಿತವೂ ನಿರಂಜನವೂ ಆಗುವುದಾದರೂ ಹೇಗೆ ?

श्रीभगवानुवाच –

आकाशो ह्यवकाशश्च आकाशं व्यापितं च यत् ।
आकाशस्य गुणः शब्दो निःशब्दं ब्रह्म चोच्यते ॥ ५० ॥

ಶ್ರೀ ಭಗವಾನ್ ಉವಾಚ–

ಮಹಾಕಾಶ ಮತ್ತು ಪರಿಚ್ಛಿನ್ನವಾದ ಘಟಾಕಾಶ ಮಠಾಕಾಶಗಳು ಆಕಾಶದ ಸೂಕ್ಷ್ಮರೂಪವಾದ ಶಬ್ದತನ್ಮಾತ್ರೆಯಿಂದ ವ್ಯಾಪ್ತವಾಗಿವೆ. ಮಿಥ್ಯಾಭೂತವಾದ ಆಕಾಶಕ್ಕೆ ಶಬ್ದತನ್ಮಾತ್ರೆಯಾದ ಶಬ್ದವು ಗುಣವೆನಿಸಿದೆ ಎಂದರೆ ಆಕಾಶದ ಗುಣ (ಉಪಾದಾನ ಕಾರಣ) ಶಬ್ದ. ಏವಂ ಚ ಶಬ್ದತನ್ಮಾತ್ರೆ ಮತ್ತು ಆಕಾಶ ಇವೆರಡೂ ಮಿಥ್ಯೆಯಾದ್ದರಿಂದ ಬ್ರಹ್ಮವು ನಿಃಶಬ್ದ (ನಿಷ್ಪ್ರಪಂಚ) ಎಂದು ಉಕ್ತವಾಗುತ್ತದೆ.

ಟಿಪ್ಪಣಿ : ಜಗತ್ತೆಲ್ಲವೂ ಮಿಥ್ಯೆ, ಭ್ರಾಂತಿಯಿಂದ ಕಲ್ಪಿತವಾದದ್ದು. ಆದ್ದರಿಂದಲೇ ಬ್ರಹ್ಮವು ಅದ್ವಿತೀಯವೆನಿಸಿದೆ. ಏವಂ ಚ ಬ್ರಹ್ಮವು ನಿರಂಜನವೂ ನಿಷ್ಕಲವೂ ಆಗಿದೆಯೆಂಬ ಸಿದ್ಧಾಂತಕ್ಕೆ ಬಾಧೆಯಿಲ್ಲ.

अर्जुन उवाच –

दन्तोष्ठतालुजिह्वानामास्पदं यत्र दृश्यते ।
अक्षरत्वं कुतस्तेषां क्षरत्वं वर्तते सदा ॥ ५१ ॥

ಬ್ರಹ್ಮವು ನಾಶರಹಿತವೆಂಬ ಅಭಿಪ್ರಾಯದಿಂದ ಅದನ್ನು ''ಅಕ್ಷರ'' ಎಂದು ಹೇಳಲಾಗುತ್ತಿದೆ. ಅದು ಹೇಗೆ ಸಮಂಜಸ ಎಂದು ಅರ್ಜುನನ ಪ್ರಶ್ನೆ. ಹೇ ಭಗವನ್! ಅಕ್ಷರವೆಂದರೆ ವರ್ಣ. ವರ್ಣವಾದರೋ ದಂತ, ಓಷ್ಠ, ತಾಲು, ಜಿಹ್ವೆ ಮುಂತಾದ ಅಂಗಗಳಿಂದ ಹುಟ್ಟುತ್ತದೆ. ಹುಟ್ಟಿದ ಮೇಲೆ ನಾಶವೂ ಆಗುತ್ತದೆ. ಇದು ಎಲ್ಲರಿಗೂ ಅನುಭವಸಿದ್ಧವಾದ ವಿಷಯ. ಹೀಗಿರುವಾಗ ಬ್ರಹ್ಮವು ನಾಶರಹಿತವೆಂದು ಹೇಗೆ ಹೇಳುವುದು ?

श्रीभगवानुवाच –

अघोषमव्यञ्जनमस्वरं चाप्यतालुकण्ठोष्ठमनासिकं च ।
अरेखजातं परमूष्मवर्जितं तदक्षरं न क्षरते कथंचित् ॥ ५२ ॥

ಶ್ರೀ ಭಗವಾನ್ ಉವಾಚ–

ಅರ್ಜುನ ! ಬ್ರಹ್ಮವಸ್ತುವಿಗೆ ಘೋಷವೆಂಬ ವರ್ಣಗುಣವೂ ಇಲ್ಲ. ಅದು ವ್ಯಂಜನವೂ ಅಲ್ಲ. ಸ್ವರವೂ ಅಲ್ಲ. ಕಂಠ ತಾಲು ಮುಂತಾದ ಅಂಗಗಳಿಂದ ಹುಟ್ಟುವುದೂ ಇಲ್ಲ. ಅನುನಾಸಿಕವೂ ಅಲ್ಲ. ರೇಖೆಯಿಂದ ಬರೆಯಲೂ ಆಗುವುದಿಲ್ಲ. ಊಷ್ಮವರ್ಣವೂ ಅಲ್ಲ. ಇಂತಹ ಅಕ್ಷರವು ಬ್ರಹ್ಮವಸ್ತು. ಅದು ಎಂದಿಗೂ ನಾಶಹೊಂದುವುದಿಲ್ಲ.

ಟಿಪ್ಪಣಿ : ಅರ್ಜುನನು ಅಕಾರಾದಿ ವರ್ಣಗಳನ್ನು ಅಕ್ಷರವೆಂದು ಭಾವಿಸಿ ಕೇವಲ ಅಜ್ಞಾನದಿಂದ ಪ್ರಶ್ನೆಮಾಡಿದ್ದಾನೆ. ಅದಕ್ಕೆ ಶ್ರೀಕೃಷ್ಣನು ''ನ ಕ್ಷರತಿ ಇತಿ ಅಕ್ಷರಮ್'' = ನಾಶರಹಿತಮ್ ಎಂಬ ಅರ್ಥದಲ್ಲಿ ನಾನು ಅಕ್ಷರ ಶಬ್ದವನ್ನು ಪ್ರಯೋಗಿಸಿದ್ದೇನೆ. ಅಕಾರಾದಿ ವರ್ಣಗಳು ಎಂಬ ಅರ್ಥದಲ್ಲಿ ಪ್ರಯೋಗಿಸಿಲ್ಲ ಎಂದು ಸಮಾಧಾನ ಹೇಳಿದ್ದಾನೆ.

अर्जुन उवाच –

ज्ञात्वा सर्वगतं ब्रह्म सर्वभूताधिवासितम् ।
इन्द्रियाणां निरोधेन कथं सिध्यन्ति योगिनः ॥ ५३ ॥

ಅರ್ಜುನ ಉವಾಚ–

ಹೇ ಭಗವನ್, ಬ್ರಹ್ಮವು ಸರ್ವವ್ಯಾಪಿಯೆಂದೂ ಸಮಸ್ತ ಪ್ರಾಣಿಗಳಲ್ಲಿಯೂ

ನೆಲೆಸಿದೆಯೆಂದೂ ಯೋಗಿಗಳು ತಿಳಿದಮೇಲೆ, ಇಂದ್ರಿಯಗಳನ್ನು ನಿಗ್ರಹಿಸುತ್ತಿದ್ದರೆ ಮುಕ್ತರಾಗುವುದು ಹೇಗೆ ?

श्रीभगवानुवाच –

इन्द्रियाणां निरोधेन देहे पश्यन्ति मानवाः ।
देहे नष्टे कुतो बुद्धिर्बुद्धिनाशे कुतो ज्ञता ॥ ५४ ॥

ಎಲ್ಲಿಯವರೆಗೆ ಇಂದ್ರಿಯಗಳನ್ನು ನಿಗ್ರಹಿಸುತ್ತಿರಬೇಕೆಂಬುದು ಅರ್ಜುನನ ಪ್ರಶ್ನೆ ಎಂದು ಶಂಕಿಸಿ ಭಗವಂತನು ಹೀಗೆಂದನು – ಜ್ಞಾನಿಗೆ ದೇಹವೂ ಇಲ್ಲ, ಇಂದ್ರಿಯಗಳೂ ಇಲ್ಲ. ಯಾವುದನ್ನು ನಿಗ್ರಹಿಸಬೇಕು.

ಎಲ್ಲಿಯ ವರೆಗೆ ಯೋಗಿಯು ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ಇಂದ್ರಿಯ ನಿಗ್ರಹವು ಅವಶ್ಯಕವಾಗುತ್ತದೆ. ಆ ಪರತತ್ತ್ವದ ಸಾಕ್ಷಾತ್ಕಾರವಾದ ಮೇಲೆ, ಎಲ್ಲ ದೇಹೇಂದ್ರಿಯಾದಿಗಳೂ ಒಂದೇ ಬ್ರಹ್ಮವೆಂದು ಯೋಗಿಯು ತಿಳಿದುಕೊಳ್ಳುತ್ತಾನೆ. ಆಗ ಯಾವ ಸಾಧನಾನುಷ್ಠಾನಗಳೂ ಬೇಕಿಲ್ಲವೆಂದು ತಾತ್ಪರ್ಯ.

तावदेव निरोधः स्याद्यावत्तत्वं न विन्दति ।
विदिते तु परे तत्त्वे एकमेवानुपश्यति ॥ ५५ ॥

ಈ ಸಾಧನವಿಧಿಯನ್ನು ಎಲ್ಲಿಯ ವರೆಗೆ ಅನುಷ್ಠಾನ ಮಾಡಬೇಕು ? ಎಂಬ ಶಂಕೆಗೆ ಅನುಷ್ಠಾನದ ಅವಧಿಯನ್ನು ಈಗ ಹೇಳಲಾಗುವುದು –

ಎಲ್ಲಿಯ ವರೆಗೆ ಆತ್ಮತತ್ತ್ವವನ್ನು ತಿಳಿಯಲಾಗುವುದಿಲ್ಲವೋ ಅಲ್ಲಿಯ ವರೆಗೆ ಇಂದ್ರಿಯ ನಿಗ್ರಹ ಮುಂತಾದ ಸಾಧನವನ್ನು ಆಚರಿಸುತ್ತಿರಬೇಕು. ಆ ಪರತತ್ತ್ವವು ತಿಳಿದ ಮೇಲೆ ಎಂದರೆ ಬ್ರಹ್ಮಸಾಕ್ಷಾತ್ಕಾರವಾದಾಗ ಸರ್ವವೂ ಬ್ರಹ್ಮವೇ ಎಂದು ಅನುಭವವಾಗುತ್ತದೆ. ಆಗ ಯಾವ ಆಚರಣೆಯೂ ಬೇಕಿಲ್ಲ.

नवच्छिद्रकृता देहाः स्रवन्ति गलिका इव ।
नैवं ब्रह्म न शुद्धं स्यात्पुमान् ब्रह्म न विन्दति ॥ ५६ ॥

ಸಾಧನಾನುಷ್ಠಾನಗಳಿಲ್ಲದೆ ಬ್ರಹ್ಮಜ್ಞಾನವಾಗುವುದಿಲ್ಲ ಎಂಬ ಅಭಿಪ್ರಾಯದಿಂದ ಮುಂದಿನ ಶ್ಲೋಕ ಬಂದಿದೆ.

ಈ ದೇಹಗಳು ಒಂಬತ್ತು ರಂಧ್ರಗಳಿಂದ ಕೂಡಿರುತ್ತವೆ. ವಿಷಯವಾಸನೆಗಳಿಂದ ಕೂಡಿದ ಜ್ಞಾನಗಳು, ತೂತಿನ ಗಡಿಗೆಯಿಂದ ದ್ರವ ಪದಾರ್ಥವು ಸುರಿದು

ಹೋಗುವಂತೆ, ಈ ದೇಹಗಳಿಂದ ಸದಾ ಸುರಿದು ಹೋಗುತ್ತಲೇ ಇವೆ. ಮನುಷ್ಯನು ಎಲ್ಲಿಯ ವರೆಗೆ ಪರಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ಈ ನವಬ್ರಹ್ಮದಿಂದ – ಎಂದರೆ – ಬ್ರಹ್ಮದ ಪ್ರತಿಬಿಂಬವಾದ ಜೀವದಿಂದ ಘಟಿತವಾದ ದೇಹವು ಶುದ್ಧವಾಗುವುದಿಲ್ಲ.

ಈ ದೇಹವು ವಿಷಯವಾಸನೆಗಳ ಜ್ಞಾನಗಳಿಂದ ಕೊಳೆಯಾಗಿರುತ್ತದೆ. ನವರಂಧ್ರಗಳಿಂದ ಇವು ಸುರಿದುಹೋಗುತ್ತವೆಯೆಂಬುದು ಆಲಂಕಾರಿಕವಾದ ನುಡಿ. ಈ ದೇಹವು ಕೊಳೆಯಾದದ್ದು. ಬ್ರಹ್ಮಜ್ಞಾನವಾದ ಮೇಲೆ ವಿಷಯವಾಸನೆಯೇ ಇರುವುದಿಲ್ಲವಾದ್ದರಿಂದ ಈ ದೇಹವು ಶುದ್ಧವಾಗುತ್ತದೆಯೆಂದು ಅಭಿಪ್ರಾಯ.

ತಾತ್ಪರ್ಯ: ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡಾಗ ನಮ್ಮ ಮುಖವು ಬಿಂಬವೆನಿಸುತ್ತದೆ. ಕನ್ನಡಿಯಲ್ಲಿ ಕಾಣುವ ಆಕೃತಿಯು ಪ್ರತಿಬಿಂಬವೆನಿಸುತ್ತದೆ. ಹಾಗೆಯೇ ಬ್ರಹ್ಮವು ಬಿಂಬವೆಂದೂ ಅವಿದ್ಯೆಯಲ್ಲಿ ಪ್ರತಿಫಲಿಸಿದ ಪ್ರತಿಬಿಂಬವು ಜೀವವೆಂದೂ ತಿಳಿಯಬೇಕು. ಜೀವನೇ ನವಬ್ರಹ್ಮ (ಹೊಸಬ್ರಹ್ಮ).

अत्यन्तमलिनो देहो देही चात्यन्तनिर्मल: ।
उभयोरन्तरं ज्ञात्वा कस्य शौचं विधीयते ।। ५७ ।।

ಈ ದೇಹವು ಅತ್ಯಂತ ಮಲಿನವಾದದ್ದು. ದೇಹಿಯಾದ ಆತ್ಮನಾದರೋ ಅತ್ಯಂತ ಪರಿಶುದ್ಧನಾದವನು. ಇವೆರಡರ ಭೇದವನ್ನು ಯಾವಾತನು ತಿಳಿದಿರುತ್ತಾನೋ ಅವನನ್ನು ಕುರಿತು ''ಶುಚಿಯಾಗು'' ಎಂದು ಹೇಳಿದರೆ ಆ ವಿಧಿಯು ಯಾರಿಗೆ ಅನ್ವಯಿಸುತ್ತದೆ ?

ತಾತ್ಪರ್ಯ: ಆತ್ಮಜ್ಞಾನಿಯನ್ನು ಕುರಿತು ''ಶುಚಿಯಾಗು'' ಎಂದು ವಿಧಿಸಿದರೆ ಅದು ಯಾರಿಗೆ ಅನ್ವಯಿಸುತ್ತದೆ ? ದೇಹವು ಎಷ್ಟು ನೀರನ್ನು ಹಾಕಿದರೂ ಶುಚಿಯಾಗುವುದಿಲ್ಲ. ಮಲ, ಮೂತ್ರ, ಮಾಂಸ, ರಕ್ತ – ಮುಂತಾದ್ದರಿಂದ ತುಂಬಿರುತ್ತದೆ. ಆತ್ಮವು ಸದಾ ನಿರ್ಮಲವಾದ್ದರಿಂದ ನೀರು ಏನನ್ನೂ ಮಾಡದು.

ಇತಿ ಶ್ರೀ ಗೌಡಪಾದಾಚಾರ್ಯ ವಿರಚಿತ ವ್ಯಾಖ್ಯಾನಸಹಿತವಾದ
ಉತ್ತರಗೀತೆಯಲ್ಲಿ ಪ್ರಥಮಾಧ್ಯಾಯ

******

ಅಥ ದ್ವಿತೀಯಾಧ್ಯಾಯ:
ಅಧ್ಯಾಯ ಎರಡು

अर्जुन उवाच –

ज्ञात्वा सर्वगतं ब्रह्म सर्वज्ञं परमेश्वरम् ।
अहं ब्रह्मेति निर्देष्टुं प्रमाणं तत्र किं भवेत् ॥ १ ॥

ಆರೂಢನಿಗೂ ಆರುರುಕ್ಷುವಿಗೂ ಇರುವ ಸ್ವರೂಪಭೇದವನ್ನು ಹೇಳಿದ್ದಾಯಿತು. ಆರೂಢನಾದವನು ಬಿಂಬವೇ ಆಗಿದ್ದಾನೆಂಬುದಕ್ಕೆ ಪ್ರಮಾಣವೇನೆಂದು ಈಗ ಅರ್ಜುನನು ಕೇಳುತ್ತಾನೆ.

ಅರ್ಜುನ ಉವಾಚ –

ಹೇ ಭಗವನ್ ! ಬ್ರಹ್ಮವು ಸರ್ವಗತವೂ ಸರ್ವಜ್ಞವೂ ಆದ ಪರಮೇಶ್ವರನೆಂಬುದನ್ನು ತಿಳಿದುಕೊಂಡದ್ದಾಯಿತು. ಆದರೆ ''ಅಹಂ ಬ್ರಹ್ಮಾಸ್ಮಿ'' ಎಂದು ನಿಶ್ಚಯಿಸಿ ತಿಳಿಯಲು ಯಾವ ಆಧಾರವಿದೆ ?

श्रीभगवानुवाच –

यथा जलं जले क्षिप्तं क्षीरे क्षीरं घृते घृतम् ।
अविशेषो भवेत्तद्वज्जीवात्मपरमात्मनो: ॥ २ ॥

ಶ್ರೀ ಭಗವಾನ್ ಉವಾಚ –

ಒಂದು ಪಾತ್ರೆಯ ನೀರನ್ನು ಹೊಳೆಯ ನೀರಿಗೆ ಚೆಲ್ಲಿದರೆ ಅದು ಹೊಳೆಯ ನೀರಿನೊಡನೆ ಕೂಡಿ ನೀರೇ ಆಗಿಬಿಡುತ್ತದೆ. ಹೀಗೆಯೇ ಹಾಲಿಗೆ ಹಾಲನ್ನೂ, ತುಪ್ಪಕ್ಕೆ ತುಪ್ಪವನ್ನು ಸೇರಿಸಿದರೆ ಹಾಲು ತುಪ್ಪಗಳೊಡನೆ ಅವು ಒಂದಾಗಿ ಬಿಡುತ್ತವೆ. ಹಾಗೆಯೇ ದೇಹವೆಂಬ ಉಪಾಧಿಯು ಕಳೆದೊಡನೆ ಎಂದರೆ ಅಜ್ಞಾನವು ನಿವೃತ್ತವಾದೊಡನೆ ಜೀವನು ಬ್ರಹ್ಮವೇ ಆಗಿಬಿಡುತ್ತಾನೆ.

जीवे परेण तादात्म्यं सर्वगं ज्योतिरीश्वरम् ।
प्रमाणलक्षणैर्ज्ञेयं स्वयमेकाग्रवेदिना ॥ ३ ॥

ಏಕಾಗ್ರತೆಯಿಂದ ಆತ್ಮಚಿಂತನೆಯಲ್ಲಿ ತೊಡಗುವ ಬ್ರಹ್ಮನಿಷ್ಠನಾದ ಗುರುವು ''ತತ್ತ್ವಮಸಿ'' ''ಯತೋ ವಾ ಇಮಾನಿ ಭೂತಾನಿ ಜಾಯಂತೇ'' ''ಯಃ ಸರ್ವಜ್ಞಃ ಸ ಸರ್ವವಿತ್'' ಇತ್ಯಾದಿ ಪ್ರಮಾಣಗಳಿಂದ ಜೀವಾತ್ಮ ಪರಮಾತ್ಮರ ಐಕ್ಯವನ್ನು

ಉಪದೇಶಿಸುತ್ತಾನೆ. ಆಗ ಶಿಷ್ಯನು ಸರ್ವಗತವೂ, ಸ್ವಯಂಪ್ರಕಾಶವಾದ ಜ್ಯೋತಿಯೂ, ಈಶ್ವರನೂ ಆದವನು ಜೀವನೇ ಎಂದು ಜೀವಾತ್ಮ ಪರಮಾತ್ಮರ ಐಕ್ಯವನ್ನು ತಿಳಿದುಕೊಳ್ಳುತ್ತಾನೆ.

अर्जुन उवाच –

ज्ञानेनैव भवेज्ज्ञेयं विदित्वा तत्क्षणेन तु ।
ज्ञानमात्रेण मुच्येत किं पुनर्योगधारणा ॥ ४ ॥

ಆಗ ಅರ್ಜುನನು ಹೇಳುತ್ತಾನೆ – ಶ್ರೀಕೃಷ್ಣ ! ಇಂತಹ ಜ್ಞಾನದಿಂದಲೇ ಜ್ಞೇಯವಾದ ಬ್ರಹ್ಮೈಕ್ಯವು ಸಿದ್ಧವಾಗುತ್ತಿರುವಾಗ ಮತ್ತೆ ಕರ್ಮಯೋಗ ಮುಂತಾದದ್ದು ಏಕೆ ಬೇಕು ?

श्रीभगवानुवाच –

ज्ञानेन दीपिते देहे बुद्धिर्ब्रह्मसमन्विता ।
ब्रह्मज्ञानाग्निना विद्वान्निर्दहेत्कर्मबन्धनम् ॥ ५ ॥

ಆಗ ಭಗವಂತನು ಹೀಗೆ ಹೇಳುತ್ತಾನೆ – ಅರ್ಜುನ ! ಜ್ಞಾನದಿಂದ ಲಿಂಗಶರೀರವು ಶುದ್ಧವಾಗುತ್ತದೆ. ಆಗ ಆತನ ಬುದ್ಧಿಯು ಬ್ರಹ್ಮನಿಷ್ಠವಾಗಿ ಸರ್ವಸಂದೇಹಗಳನ್ನೂ ನಿವಾರಿಸಿಕೊಳ್ಳುತ್ತಾನೆ. ಜ್ಞಾನಾಗ್ನಿಯಿಂದ ಸರ್ವಕರ್ಮಗಳೂ ನಾಶವಾಗುತ್ತವೆ.

ತಾತ್ಪರ್ಯ: ಕರ್ಮಯೋಗವು ಚಿತ್ತಶುದ್ಧಿಯನ್ನುಂಟುಮಾಡುತ್ತದೆ. ಅದಕ್ಕಾಗಿ ಕರ್ಮಯೋಗ ಬೇಕು. ಅನಂತರವೇ ಆತ್ಮಜ್ಞಾನವು ಪ್ರಾಪ್ತವಾಗುತ್ತದೆ. ಆಗ ಕರ್ಮಯೋಗವು ಬೇಕಾಗಿಲ್ಲ.

ततः पवित्रं परमेश्वराख्यमद्वैतरूपं विमलाम्बराभम् ।
यथोदके तोयमनुप्रविष्टं तथात्मरूपो
निरुपाधिसंस्थितः ॥ ६ ॥

ಆತ್ಮಜ್ಞಾನವು ಪ್ರಾಪ್ತವಾದ ಮೇಲೆ ಜೀವನು ಪವಿತ್ರನಾಗಿ ಅದ್ವೈತನಾದ ಪರಮೇಶ್ವರನೇ ಆಗಿಬಿಡುತ್ತಾನೆ. ನಿರ್ಮಲವಾದ ಆಕಾಶದಂತಾಗುತ್ತಾನೆ. ಪಾತ್ರೆಯಲ್ಲಿರುವ ಜಲವು ಸಮುದ್ರದ ಜಲದಲ್ಲಿ ಸೇರಿದಂತೆ ಪರಮಾತ್ಮ ಸ್ವರೂಪನಾಗಿ ಎಲ್ಲ ಉಪಾಧಿಗಳನ್ನು ಕಳೆದುಕೊಳ್ಳುತ್ತಾನೆ.

ವಿವರಣೆ: ಆತ್ಮಜ್ಞಾನಿಯು ಸ್ವಯಂ ಕ್ರಿಯಾರಹಿತನೇ ಸರಿ. ದೇಹಾದಿಗಳು ತಮ್ಮ ಕೆಲಸವನ್ನು ಮಾಡುತ್ತಿದ್ದರೂ ''ಗುಣಾ ಗುಣೇಷು ವರ್ತಂತೇ'' ಎಂದು ತಿಳಿದು ಜ್ಞಾನಿಯು ಉದಾಸೀನನಾಗುತ್ತಾನೆ.

आकाशवत्सूक्ष्मशरीर आत्मा न दृश्यते वायुवदन्तरात्मा ।
स बाह्यमभ्यन्तरनिश्चलात्मा ज्ञानोल्कया
पश्यति चान्तरात्मा ॥ ७ ॥

ಪರಮಾತ್ಮನು ಆಕಾಶದಂತೆ ಅತೀಂದ್ರಿಯನೂ, ಜ್ಞಾನಸ್ವರೂಪನೂ, ವಾಯುವಿನಂತೆ ಅದೃಶ್ಯನೂ, ಅಂತರಾತ್ಮನೂ ಆಗಿರುತ್ತಾನೆ. ಹಾಗೆಯೇ ಜೀವನೂ ಸಹ ಜ್ಞಾನವೆಂಬ ಪಂಜಿನಿಂದ ಅಜ್ಞಾನವನ್ನು ಸುಟ್ಟು ಹಾಕಿ ಬಾಹ್ಯಾಭ್ಯಂತರಗಳಲ್ಲಿ ನಿಶ್ಚಲನಾಗಿ ಬ್ರಹ್ಮವೇ ಆಗಿಬಿಡುತ್ತಾನೆ.

ಟಿಪ್ಪಣಿ : ಶ್ಲೋಕದ ಎರಡನೆಯ ಸಾಲಿನಲ್ಲಿ ''ಬಾಹ್ಯಮಭ್ಯಂತರ ನಿಶ್ಚಲಾತ್ಮಾ'' ಎಂದು ಇದೆ. ಇಲ್ಲಿ ಬಾಹ್ಯಶಬ್ದಕ್ಕೆ ಸಮಾಸವಾದರೆ ನಡುವೆ ಮಕಾರ ಇರಬಾರದು. ಮಕಾರರಹಿತವಾಗಿ ''ಬಾಹ್ಯಾಭ್ಯಂತರ'' ಎಂದಿರಬೇಕು. ಆಗ ಶ್ಲೋಕದಲ್ಲಿ ಒಂದು ಅಕ್ಷರ ಕಡಿಮೆಯಾಗುತ್ತದೆ. ಆದರೂ ಆರ್ಷಪ್ರಯೋಗವೆಂದು ಸಮಾಧಾನಮಾಡಿಕೊಳ್ಳಬೇಕು.

यत्र यत्र मृतो ज्ञानी येन वा केन मृत्युना ।
यथा सर्वगतं व्योम तत्र तत्र लयं गतम् ॥ ८ ॥

ಇಂತಹ ಆತ್ಮಜ್ಞಾನಿಯು ಯಾವ ಯಾವ ಸ್ಥಳದಲ್ಲಿ ಯಾವ ಯಾವ ಪ್ರಕಾರದ ಮರಣವೇ ಬಂದರೂ ಅಲ್ಲಿಯೇ ಬ್ರಹ್ಮದಲ್ಲಿ ಲಯವನ್ನು ಹೊಂದಿಬಿಡುತ್ತಾನೆ. ಅವನು ಸರ್ವವ್ಯಾಪಿಯಾದ್ದರಿಂದ ಸರ್ವವ್ಯಾಪಿಯಾದ ಆಕಾಶದಂತೆ ಆಗಿರುತ್ತಾನೆ.

ವಿವರಣೆ: ಗಡಿಗೆಯು ಎಲ್ಲಿ ಯಾವ ಪ್ರಕಾರದಲ್ಲಿ ಒಡೆದುಹೋದರೂ ಅದರಲ್ಲಿರುವ ಆಕಾಶವು ಮಹಾಕಾಶದಲ್ಲಿ ಸೇರಿ ಬಿಡುತ್ತದೆ. ವಸ್ತುತಃ ಆಕಾಶವು ಮಹಾಕಾಶವೇ ಆಗಿರುತ್ತದೆ. ಗಡಿಗೆಯು ಕೇವಲ ಒಂದು ಉಪಾಧಿ. ಹಾಗೆಯೇ ಜ್ಞಾನಿಗೆ ದೇಹವು ಅಜ್ಞಾನ ಕಲ್ಪಿತವಾದ ಒಂದು ಉಪಾಧಿ ಎಂದು ತಿಳಿಯಬೇಕು.

शरीरव्यापितं व्योम भुवनानि चतुर्दश ।
निश्चलो निर्मलो देही सर्वव्यापी निरञ्जन : ॥ ९ ॥

ಜೀವವು ಅಣುಪರಿಮಾಣವಾಗಿರುತ್ತದೆಂದು ಕೆಲವರ ಹೇಳಿಕೆಯಿದೆ. ಆಗ ಮೇಲ್ಕಂಡ ವಿಷಯವು ಸರಿಯಾಗುವುದಿಲ್ಲವೆಂಬ ಸಂದೇಹಕ್ಕೆ ಉತ್ತರ –

ಶರೀರವ್ಯಾಪಿಯಾದ ಆಕಾಶವು ಹದಿನಾಲ್ಕು ಲೋಕಗಳನ್ನೂ ವ್ಯಾಪಿಸಿಕೊಂಡಿರುತ್ತದೆ. ಹಾಗೆಯೇ ದೇಹದಲ್ಲಿರುವ ಆತ್ಮನು ಸರ್ವವ್ಯಾಪಿಯೂ ನಿಶ್ಚಲನೂ ನಿರ್ಮಲನೂ ನಿರಂಜನನೂ ಆಗಿರುತ್ತಾನೆ. ಅವನು ಅಣುಪರಿಮಾಣನಲ್ಲ.

मुहूर्तमपि योगश्चेन्नासाग्रे मनसा सह ।
सर्वं तरति पाप्मानं तस्य जन्मशतार्जितम् ॥ १० ॥

ತತ್ತ್ವಜ್ಞಾನಿಗಳಿಗಾಗುವ ಮುಕ್ತಿಸ್ವರೂಪವನ್ನು ಹೇಳಿದ್ದಾಯಿತು. ಇನ್ನು ಮುಂದೆ ತತ್ತ್ವಜ್ಞಾನದ ಸಾಧನೆಗಳನ್ನು ಮಾಡತಕ್ಕವನಿಗೆ ಸರ್ವವಿಧದ ಪಾಪವೂ ಹೋಗುತ್ತದೆ, ದೂರವಾಗುತ್ತದೆ ಎಂದು ಹೇಳಲಾಗುವುದು –

ಯಾವ ಸಾಧಕನು ಒಂದು ಮುಹೂರ್ತಕಾಲ ನಾಸಾಗ್ರದಲ್ಲಿ ದೃಷ್ಟಿಯನ್ನಿರಿಸಿ ಮನಸ್ಸನ್ನೂ ಇಂದ್ರಿಯಗಳನ್ನೂ ನಿಗ್ರಹಿಸಿ ಏಕಾಗ್ರತೆಯಿಂದ ಯೋಗವನ್ನು ಆಚರಿಸುವನೋ ಆತನ ಪಾಪವು ನೂರು ಜನ್ಮಗಳಿಂದ ಬಂದದ್ದಾದರೂ ಅದನ್ನು ದಾಟಿ ಹೋಗುತ್ತಾನೆ. ಆ ಪಾಪವು ನಾಶವಾಗುತ್ತದೆ.

दक्षिणे पिङ्गला नाडी वह्निमण्डलगोचरा ।
देवयानमिति ज्ञेया पुण्यकर्मानुसारिणी ॥ ११ ॥

ಮುಕ್ತಿಯು ಸದ್ಯೋ ಮುಕ್ತಿ, ಕ್ರಮ ಮುಕ್ತಿ ಎಂದು ಎರಡು ವಿಧ. ''ಅತ್ರ ಬ್ರಹ್ಮ ಸಮಶ್ನುತೇ'' ಇತ್ಯಾದಿ ಶ್ರುತಿಯು ಸದ್ಯೋ ಮುಕ್ತಿಯನ್ನು ಹೇಳಿದೆ. ''ಬ್ರಹ್ಮಣಾ ಸಹ ತೇ ಸರ್ವೇ ಸಂಪ್ರಾಪ್ತೇ ಪ್ರತಿ ಸಂಚರೇ'' ಇತ್ಯಾದಿ ಶ್ರುತಿಯು ಕ್ರಮ ಮುಕ್ತಿಯನ್ನು ಹೇಳಿದೆ. ಆವೆರಡರ ಸ್ವರೂಪವನ್ನು ಈಗ ಹೇಳಲಾಗುವುದು –

ನಮ್ಮ ದೇಹದ ಬಲಭಾಗದಲ್ಲಿ ಪಿಂಗಲಾ ನಾಡಿಯಿದೆ, ಅದು ಮೂಲಾಧಾರದಿಂದ ವಹ್ನಿಮಂಡಲದವರೆಗೂ ಹೋಗಿದೆ. ಪುಣ್ಯಾತ್ಮರಿಗೆ ಲಭ್ಯವಾಗುವ ಈ ನಾಡಿಗೆ ದೇವಯಾನವೆಂದು ಹೆಸರು.

इडा च वामनिश्वाससोममण्डलगोचरा ।
पितृयानमिति ज्ञेया वाममाश्रित्य तिष्ठति ॥ १२ ॥

ದೇಹದ ಎಡಭಾಗದಲ್ಲಿ ಮೂಲಾಧಾರದಿಂದ ಹೊರಟು ಎಡಭಾಗದ ಉಸಿರಿನೊಡನೆ ಸೋಮಮಂಡಲದ ವರೆಗೆ ಹೋದ ನಾಡಿಗೆ ಇಡಾ ಎಂದು ಹೆಸರು. ಈ ನಾಡಿಗೆ ಪಿತೃಯಾನವೆಂದು ಹೆಸರು.

गुदस्य पृष्ठभागेऽस्मिन् वीणादण्डस्य देहभृत् ।
दीर्घास्थि मूर्ध्निपर्यन्तं ब्रह्मदण्डीति कथ्यते ॥ १३ ॥

ಈ ದೇಹದಲ್ಲಿ ಗುದದ ಹಿಂಭಾಗದಲ್ಲಿ ವೀಣಾದಂಡದಂತೆ ದೀರ್ಘವಾದ ಒಂದು ಮೂಳೆಯಿದೆಯಷ್ಟೇ, ಇದು ಶಿರಸ್ಸಿನ ವರೆಗೂ ಹೋಗಿರುತ್ತದೆ, ಈ ಮೂಳೆಗೆ ಬ್ರಹ್ಮದಂಡೀ ಎಂದು ಹೆಸರು.

तस्यान्ते सुषिरं सूक्ष्मं ब्रह्मनाडीति सूरिभिः ॥ १४ ॥

ಈ ಬ್ರಹ್ಮದಂಡಿಯ ಮೇಲ್ಭಾಗದ ತುದಿಯಲ್ಲಿ ರಂಧ್ರವಿದೆ. ಈ ನಾಡಿಯಲ್ಲಿರುವ ಸೂಕ್ಷ್ಮವಾದ ನಾಳವು ಬ್ರಹ್ಮನಾಡಿಯೆನಿಸುತ್ತದೆ.

इडापिङ्गलयोर्मध्ये सुषुम्णा सूक्ष्मरूपिणी ।
तस्याग्रे सर्वगं सर्वं यस्मिन् सर्वं प्रतिष्ठितम् ॥ १५ ॥

ಇಡಾ ಪಿಂಗಳಾ ನಾಡಿಗಳ ನಡುವೆ ಅತ್ಯಂತ ಸೂಕ್ಷ್ಮವಾದ ಸುಷುಮ್ನಾ ನಾಡಿಯಿದೆ. ಅದರ ಅಗ್ರಭಾಗದಲ್ಲಿ ಸರ್ವಗಾಮಿಯೂ ಸರ್ವತೋಮುಖವೂ ಸರ್ವವೂ ಆದ ಬ್ರಹ್ಮಜ್ಯೋತಿಯು ಪ್ರತಿಷ್ಠಿತವಾಗಿದೆ.

ವಿವರಣೆ : ಇಡಾ ಪಿಂಗಳಾ ನಾಡಿಗಳ ನಡುವೆ ಅತಿಸೂಕ್ಷ್ಮವಾದ ಸುಷುಮ್ನಾ ನಾಡಿಯಿದೆ.

ಇದು ಮೂಲಾಧಾರದಿಂದ ಸ್ವಾಧಿಷ್ಠಾನಾದಿ ಚಕ್ರಗಳ ಮೂಲಕ ಹಾದು ಶಿರಸ್ಸಿನಲ್ಲಿ ಸಹಸ್ರಾರ ಚಕ್ರದ ವರೆಗೆ ಹೋಗಿರುತ್ತದೆ. ಮೇಲಿನ ತುದಿಯಲ್ಲಿ ಬ್ರಹ್ಮವೇ ಪ್ರತಿಷ್ಠಿತವಾಗಿದೆಯೆಂದು ಯೋಗಿಗಳ ವಚನವಿದೆ. ''ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ'' ''ಶತಂ ಚೈಕಾ ಹೃದಯಸ್ಯ ನಾಡ್ಯಃ'' ಇತ್ಯಾದಿ ಶ್ರುತಿಗಳು ಇಲ್ಲಿ ಪ್ರಮಾಣ.

ಗೌಡಪಾದೀಯ ವ್ಯಾಖ್ಯಾನದಲ್ಲಿ ಸುಷುಮ್ನಾ ನಾಡಿಯು ಶಿರಸ್ಸಿನಲ್ಲಿರುವ ಸೂರ್ಯಮಂಡಲದ ವರೆಗೂ ವ್ಯಾಪಿಸಿದೆಯೆಂದು ಬರೆಯಲಾಗಿದೆ.

तस्या मध्यगताः सूर्यसोमाग्निपरमेश्वराः ।
भूतलोका दिशः क्षेत्रं समुद्राः पर्वताः शिलाः ॥ १६ ॥

ಆ ಸುಷುಮ್ನಾ ನಾಡಿಯ ನಡುವೆ ಸೂರ್ಯ, ಚಂದ್ರ, ಅಗ್ನಿ ಮಂಡಲಗಳಿವೆ. ಅವುಗಳ ನಡುವೆ ಈಶ್ವರನಿದ್ದಾನೆ, ಪಂಚಮಹಾಭೂತಗಳೂ ಚತುರ್ದಶ ಭುವನಗಳೂ, ದಿಕ್ಕುಗಳೂ, ಸಮುದ್ರಗಳೂ, ಪರ್ವತಗಳೂ, ಶಿಲೆಗಳೂ ಪ್ರತಿಷ್ಠಿತವಾಗಿವೆ.

द्वीपाश्च निम्नगा वेदाः शास्त्रविद्याकलाक्षराः ।
स्वरमन्त्रपुराणानि गुणाश्चैते च सर्वशः ॥ १७ ॥

ಅಲ್ಲದೆ ಆ ನಾಡಿಯ ನಡುವೆ ಸಕಲ ದ್ವೀಪಗಳೂ, ನದಿಗಳೂ, ವೇದಗಳೂ, ಶಾಸ್ತ್ರಗಳೂ, ವಿದ್ಯೆಗಳೂ, ಕಲೆಗಳೂ, ಸ್ವರ-ವ್ಯಂಜನಗಳೆಂಬ ಅಕ್ಷರಗಳೂ, ಉದಾತ್ತಾದಿ ಸ್ವರಗಳೂ, ಗಾಯತ್ರೀ ಮುಂತಾದ ಮಂತ್ರಗಳೂ, ಪುರಾಣಗಳೂ, ಸತ್ವರಜಸ್ತಮೋ ಗುಣಗಳೂ ಪ್ರತಿಷ್ಠಿತವಾಗಿವೆ.

बीजं बीजात्मकास्तेषां क्षेत्रज्ञाः प्राणवायवः ।
सुषुम्णान्तर्गतं विश्वं तस्मिन् सर्वं प्रतिष्ठितम् ॥ १८ ॥

ಅಲ್ಲದೇ ಬೀಜವೆನಿಸಿದ ಪ್ರಧಾನವೂ ಅದರಿಂದ ಹುಟ್ಟುವ ಮಹದಾದಿಗಳೂ, ವಿಭಿನ್ನ ಜೀವಗಳೂ, ಪ್ರಾಣವಾಯುಗಳೂ ಹೀಗೆ ಸಮಸ್ತ ವಿಶ್ವವೂ ಈ ಸುಷುಮ್ನಾ ನಾಡಿಯಲ್ಲಿ ಪ್ರತಿಷ್ಠಿತವಾಗಿವೆ.

नानानाडीप्रसवगं सर्वभूतान्तरात्मनि ।
ऊर्ध्वमूलमधःशाखं वायुमार्गेण सर्वगम् ॥ १९ ॥

ಸರ್ವಪ್ರಾಣಿಗಳಿಗೂ ಅಂತರಾತ್ಮಸ್ವರೂಪವಾದ ದೇಹಾಂತರ್ಗತವಾದ ಕುಂಡಲಿನೀ ಶಕ್ತಿಯಲ್ಲಿ ನಾನಾ ನಾಡಿಗಳ ಉತ್ಪತ್ತಿ ಸ್ಥಾನವೂ ಊರ್ಧ್ವಮೂಲವೂ ಅಧಃಶಾಖವೂ ಆದ ಜಗತ್ತು ಪ್ರತಿಷ್ಠಿತವಾಗಿದೆ. ಇದು ಪ್ರಾಣಾಪಾನಾದಿ ವಾಯು ಮಾರ್ಗದಿಂದ ಪ್ರತಿಷ್ಠಿತವಾಗಿದೆ. ಸರ್ವವ್ಯಾಪ್ತವಾಗಿದೆ.

ಟಿಪ್ಪಣಿ : ಸರ್ವವ್ಯಾಪ್ತವೆಂದರೆ ಜಗತ್ತಿಗೆ ಉಪಾದಾನಕಾರಣವೆಂದರ್ಥ. ವಸ್ತುತಃ ಈ ಸ್ಥಾನವು ಬ್ರಹ್ಮದ ಉಪಾಸನೆಗೆ ಗೋಚರವಾಗುವ ಸ್ಥಾನ. ಈ ಸ್ಥಾನವೇ

ಬ್ರಹ್ಮವೆಂದು ವರ್ಣಿಸಲಾಗಿದೆ. ''ಊರ್ಧ್ವಮೂಲಮಧಃ ಶಾಖಮ್'' ಎಂಬ ಗೀತಾವಚನವನ್ನು ನೋಡಿ (ಭಗವದ್ಗೀತಾ 15-1).

द्विसप्ततिसहस्त्राणि नाड्य: स्युर्वायुगोचरा: ।
कर्ममार्गेण सुषिरास्तिर्यञ्च: सुषिरात्मका: ॥ २० ॥

ಈ ಸ್ಥಾನದಿಂದ ಎಪ್ಪತ್ತೆರಡು ಸಾವಿರ ನಾಡಿಗಳು ಹೊರಡುತ್ತವೆ. ಇವುಗಳಲ್ಲಿ ವಾಯುವು ಸಂಚರಿಸುತ್ತದೆ. ಕರ್ಮಮಾರ್ಗದಿಂದ ನಡೆಯತಕ್ಕವರಿಗೆ ಪುನರಾವೃತ್ತಿಯನ್ನು ಉಂಟುಮಾಡುವ ರಂಧ್ರಗಳು ಇವು. ಇವು ಕೆಳಮಾರ್ಗದಲ್ಲಿ ಪ್ರವೃತ್ತವಾಗಿವೆ.

अधश्चोर्ध्वगतास्तासु नवद्वाराणि रोधयन् ।
वायुना सह जीवोर्ध्वे ज्ञानी मोक्षमवाप्नुयात् ॥ २१ ॥

ದೇಹದ ಕೆಳಭಾಗ ಮತ್ತು ಊರ್ಧ್ವಭಾಗಗಳಲ್ಲಿ ಹರಡಿರುವ ಈ ನಾಡಿಗಳ ಮಧ್ಯದಲ್ಲಿರುವ ಸುಷುಮ್ನಾ ನಾಡಿಯ ಮೂಲಕ ಪ್ರಾಣಾಯಾಮದಿಂದ ನವದ್ವಾರಗಳನ್ನು ತಡೆಯಬಲ್ಲ ಜೀವಾತ್ಮನು ಊರ್ಧ್ವದಲ್ಲಿ ನೆಲೆಸಿರುವ ಬ್ರಹ್ಮದ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಅನಂತರ ಬ್ರಹ್ಮೈಕ್ಯವನ್ನು ಪಡೆದು ಮುಕ್ತನಾಗುತ್ತಾನೆ. ''ತಯೋರ್ಧ್ವಮಾಯನ್ ಅಮೃತತ್ತ್ವಮೇತಿ'' ಎಂಬ ಶ್ರುತಿಯು ಇದಕ್ಕೆ ಪ್ರಮಾಣ.

अमरावतीन्द्रलोकेऽस्मिन्नासाग्रे पूर्वतो दिशि ।
अग्निलोको ह्यथ ज्ञेयश्चक्षुस्तेजोवती पुरी ॥ २२ ॥

ಈ ಸುಷುಮ್ನಾ ನಾಡಿಯ ಪೂರ್ವದಿಕ್ಕಿನಲ್ಲಿ ನಾಸಿಕದ ತುದಿಯಲ್ಲಿ ಇಂದ್ರಾದಿಗಳ ವಾಸಸ್ಥಾನವಾದ ಅಮರಾವತಿ ನಗರವಿದೆಯೆಂದು ತಿಳಿಯಬೇಕು. ಬಲಗಣ್ಣಿನಲ್ಲಿ ತೇಜೋವತಿಯೆಂಬ ಅಗ್ನಿಲೋಕವಿದೆ.

याम्या संयमनी श्रोत्रे यमलोक: प्रतिष्ठित: ।
नैर्ऋतो ह्यथ तत्पार्श्वे नैर्ऋतो लोक आश्रित: ॥ २३ ॥

ಬಲಗಿವಿಯಲ್ಲಿ ಯಮನಗರಿಯಾದ ಸಂಯಮಿನೀ ನಗರವಿದೆ. ಇದು ಯಮಾದಿ ದೇವತೆಗಳ ಸ್ಥಾನ. ಅದರ ಪಕ್ಕದಲ್ಲಿ ನಿರ್ಋತಿಯ ನೈರ್ಋತವೆಂಬ ಲೋಕವಿದೆ.

विभावरी प्रतीच्यां तत्पृष्ठे वारुणिका पुरी ।
वायोर्गन्धवती कर्णपार्श्वे लोकः प्रतिष्ठितः ॥ २४ ॥

ಕಿವಿಯ ಪಶ್ಚಿಮ ದಿಕ್ಕಿನಲ್ಲಿ ವಿಭಾವರಿ ಎಂಬ ವರುಣ ನಗರವಿದೆ. ಎಡಗಿವಿಯ ಸಮೀಪದಲ್ಲಿಯೇ ಗಂಧವತಿಯೆಂಬ ವಾಯುವಿನ ನಗರವಿದೆ.

सौम्या पुष्पवती सौम्ये सोमलोकस्तु कण्ठतः ।
वामकर्णं तु विज्ञेयो देहमाश्रित्य तिष्ठति ॥ २५ ॥

ಕುತ್ತಿಗೆಯಿಂದ ಮೇಲೆ ಎಡಗಿವಿಯ ಭಾಗದಲ್ಲಿ ಕುಬೇರನ ಪುಷ್ಪವತೀ ನಗರವಿದೆ, ಇದಕ್ಕೆ ಸೋಮಲೋಕವೆಂಬ ಹೆಸರೂ ಇದೆ.

वामे चक्षुषि चैशानी शिवलोको मनोन्मनी ।
मूर्ध्नि ब्रह्मपुरी ज्ञेया ब्रह्माण्डं देहमाश्रितम् ॥ २६ ॥

ಎಡಗಣ್ಣಿನಲ್ಲಿ ಈಶ್ವರನಿಗೆ ಸೇರಿದ ಮನೋನ್ಮನೀ ಎಂಬ ಶಿವಲೋಕವಿದೆ. ಶಿರಸ್ಸಿನಲ್ಲಿ ಬ್ರಹ್ಮಲೋಕವಿರುತ್ತದೆ. ಹೀಗೆ ಬ್ರಹ್ಮಾಂಡವೆಲ್ಲವೂ ದೇಹದಲ್ಲಿಯೇ ಇರುತ್ತದೆ.

पादादधः शिवोऽनन्तः कालाग्निप्रलयात्मकः ।
अनामयमधश्चोर्ध्वं मध्यमं तु बहिः शिवम् ॥ २७ ॥

ಪಾದದ ಕೆಳಭಾಗದಲ್ಲಿ ಅನಂತನೆಂಬ ಮಹಾಶೇಷನಿದ್ದಾನೆ, ಅವನು ರುದ್ರಸ್ವರೂಪನು: ಪ್ರಳಯಕಾಲದ ಕಾಲಾಗ್ನಿಸ್ವರೂಪನು. ಆತನು ತನ್ನ ಕೆಳಗೆ, ಮೇಲೆ ಮತ್ತು ಮಧ್ಯದಲ್ಲಿ ಮತ್ತು ಹೊರಗಡೆ ಪರಿಶುದ್ಧನೂ, ಮಂಗಲಸ್ವರೂಪನೂ ಆಗಿದ್ದಾನೆ.

अधः पदोऽतलं विधात्पादं च वितलं विदुः ।
नितलं पादसंधिं च सुतलं जङ्घमुच्यते ॥ २८ ॥
महातलं च जानु स्यादूरुदेशे रसातलम् ।
कटिस्तलातलं प्रोक्तं सप्तपातालसंज्ञया ॥ २९ ॥

ಪಾದದ ಕೆಳಭಾಗದಲ್ಲಿ ಅತಳವಿದೆಯೆಂದೂ ಪಾದವೇ ವಿತಳವೆಂದೂ ಯೋಗಿಗಳು ತಿಳಿದಿದ್ದಾರೆ. ಪಾದದ ಸಂಧಿಯನ್ನು ನಿತಳವೆಂದೂ ಮೊಳಕಾಲನ್ನು

ಸುತಳವೆಂದೂ ಮಂಡಿಯನ್ನು ಮಹಾತಳವೆಂದೂ ತಿಳಿಯಬೇಕು. ತೊಡೆಯಲ್ಲಿ ರಸಾತಳವಿದೆ. ಸೊಂಟವು (ಟೊಂಕ) ತಳಾತಳವೆಂದೂ ಉಕ್ತವಾಗಿದೆ. ಹೀಗೆ ಸಪ್ತಪಾತಾಳಗಳೂ ದೇಹದಲ್ಲಿವೆಯೆಂದು ಕಲ್ಪಿಸಿಕೊಳ್ಳಬೇಕು.

कालाग्निनरकं घोरं महापातालसंज्ञया ।
पातालं नाभ्यधोभागः भोगीन्द्रफणिमण्डलम् ।
वेष्टितः सर्वतोऽनन्तः स बिभ्रज्जीवसंज्ञकः ॥ ३० ॥

ಹೊಕ್ಕಳಿನ ಅಧೋಭಾಗವು ಸರ್ಪಗಳ ಹಾಗೂ ಸರ್ಪರಾಜನ ವಾಸಸ್ಥಾನವಾದ ಮಹಾಪಾತಾಳವೆಂದು ತಿಳಿಯಬೇಕು. ಇದು ಕಾಲಾಗ್ನಿಯಂತೆ ಘೋರ ನರಕದಂತೆ ಇರುತ್ತದೆ. ಇಲ್ಲಿ ಜೀವನೆನಿಸಿದ ಶೇಷನು ಕುಂಡಲಾಕಾರನಾಗಿ ಸುತ್ತಿಕೊಂಡು ಸರ್ವವನ್ನೂ ಧರಿಸಿರುತ್ತಾನೆ. ಇವನೇ ಅನಂತ.

भूलोकं नाभिदेशं तु भुवर्लोकं तु कुक्षितः ।
हृदयं स्वर्गलोकं तु सूर्यादिग्रहतारकाः ॥ ३१ ॥

ನಾಭಿದೇಶವು ಭೂಲೋಕವೆಂದೂ, ಹೊಟ್ಟೆಯು ಭುವರ್ಲೋಕವೆಂದೂ, ಹೃದಯವು ಸ್ವರ್ಗಲೋಕವೆಂದೂ ತಿಳಿಯಬೇಕು. ಸೂರ್ಯನೇ ಮೊದಲಾದ ಗ್ರಹಗಳೂ ನಕ್ಷತ್ರಗಳೂ ಈ ಹೃದಯದಲ್ಲಿಯೇ ನೆಲೆಸಿರುತ್ತವೆ.

सूर्यसोमसुनक्षत्रं बुधशुक्रकुजाङ्गिराः ।
मन्दश्च सप्तमो ज्ञेयो ध्रुवोऽन्तः स्वर्गलोकतः ॥ ३२ ॥

ಸೂರ್ಯ, ಚಂದ್ರ, ನಕ್ಷತ್ರ, ಬುಧ, ಶುಕ್ರ, ಕುಜ, ಬೃಹಸ್ಪತಿ ಮತ್ತು ಏಳನೆಯ ಗ್ರಹವಾದ ಶನಿ ಇವರೇ ಸೂರ್ಯಾದಿ ಗ್ರಹ ನಕ್ಷತ್ರಗಳು.

ಹೃದಯವೆಂಬ ಈ ಸ್ವರ್ಗಲೋಕದ ಮೇಲೆ ಧ್ರುವ ನಕ್ಷತ್ರವಿದೆ.

हृदये कल्पयन्योगी तस्मिन्सर्वसुखं भवेत् ॥ ३३ ॥

ಯೋಗಿಯಾದವನು ಹೃದಯದಲ್ಲಿ ಇವೆಲ್ಲವೂ ಇವೆಯೆಂದು ಕಲ್ಪಿಸಿಕೊಂಡಾಗ ಸರ್ವವಿಧವಾದ ಸುಖವನ್ನೂ ಅನುಭವಿಸುತ್ತಾನೆ.

हृदयस्थमहर्लोकं जनोलोकं तु कण्ठतः ।
तपोलोकं भ्रुवोर्मध्ये मूर्ध्नि सत्यं प्रतिष्ठितम् ॥ ३४ ॥

ಹೃದಯದ ಮೇಲ್ಭಾಗದಲ್ಲಿ ಮಹರ್ಲೋಕವೂ, ಕಂಠದಲ್ಲಿ ಜನೋಲೋಕವೂ, ಹುಬ್ಬುಗಳ ನಡುವೆ ತಪೋಲೋಕವು ಇವೆಯೆಂದು ತಿಳಿಯಬೇಕು. ಶಿರಸ್ಸಿನಲ್ಲಿ ಸತ್ಯಲೋಕವಿದೆ.

ब्रह्माण्डरूपिणी पृथ्वी तोयमध्ये विलीयते ।
अग्निना पच्यते तोयं वायुना ग्रस्यतेऽनलः ॥ ३५ ॥

ಇದುವರೆಗೆ ದೇಹದಲ್ಲಿಯೇ ಸರ್ವಲೋಕಗಳೂ ಇವೆಯೆಂದು ಕಲ್ಪಿಸಿಕೊಳ್ಳುವ ಪ್ರಕಾರವನ್ನು ಹೇಳಿದ್ದಾಯಿತು. ಈಗ ಅವುಗಳ ಲಯಪ್ರಕಾರವನ್ನು ಹೇಳಲಾಗುವುದು –

ಬ್ರಹ್ಮಾಂಡದ ಏಕದೇಶವಾದ ಪೃಥ್ವಿಯು ಜಲದಲ್ಲಿ ಲಯವಾಗುವುದು. ಜಲವು ಅಗ್ನಿಯಿಂದ ಲಯಹೊಂದುವುದು. ಅಗ್ನಿಯು ವಾಯುವಿನಲ್ಲಿ ಲಯವಾಗುವುದು.

आकाशं तु पिबेद्वायुं मनश्चाकाशमेव च ।
बुद्ध्यहंकारचित्तं च क्षेत्रज्ञः परमात्मनि ॥ ३६ ॥

ಆಕಾಶವು ವಾಯುವನ್ನು ಲಯಗೊಳಿಸುವುದು. ಆಕಾಶವು ಮನಸ್ಸಿನಲ್ಲಿ ಲಯಹೊಂದುವುದು. ಮನಸ್ಸು ಬುದ್ಧಿಯಲ್ಲಿಯೂ, ಬುದ್ಧಿಯು ಅಹಂಕಾರದಲ್ಲಿಯೂ, ಅಹಂಕಾರವು ಚಿತ್ತದಲ್ಲಿಯೂ, ಚಿತ್ತವು ಜೀವಚೈತನ್ಯದಲ್ಲಿಯೂ, ಜೀವಚೈತನ್ಯವು ಪರಮಾತ್ಮನಲ್ಲಿಯೂ ಲಯಹೊಂದುತ್ತವೆ.

अहं ब्रह्मेति मां ध्यायेदेकाग्रमनसा सकृत् ।
सर्वं तरति पाप्मानं कल्पकोटिशतैः कृतम् ॥ ३७ ॥

ಈ ಪ್ರಕಾರವಾಗಿ ಯೋಗಾಭ್ಯಾಸದಿಂದ ಬ್ರಹ್ಮೈಕ್ಯವನ್ನು ಪಡೆದ ಯೋಗಿಯ ಸಕಲ ದುರಿತಗಳೂ ಲಯ ಹೊಂದುತ್ತವೆಯೆಂದು ಈಗ ಹೇಳಲಾಗುವುದು.

ಭಗವಂತನು ಹೇಳುತ್ತಾನೆ –

''ಅಹಂ ಬ್ರಹ್ಮಾಸ್ಮಿ'' ಎಂದು ಏಕಾಗ್ರವಾದ ಮನಸ್ಸಿನಿಂದ ಒಮ್ಮೆ ನನ್ನನ್ನು ಧ್ಯಾನಿಸಿದರೆ ಸಾಕು, ಆ ಯೋಗಿಯು ಸಕಲ ಪಾಪಗಳನ್ನೂ – ಕಲ್ಪ ಕೋಟಿ ಶತಗಳಲ್ಲಿ

ಆರ್ಜಿಸಿದುದಾದರೂ ಅದೆಲ್ಲವನ್ನೂ ದಾಟಿ ಹೋಗುತ್ತಾನೆ ಎಂದರೆ ಅವನ ಸಮಸ್ತ ಪಾಪವೂ ನಾಶ ಹೊಂದುತ್ತದೆ.

घटसंवृतमाकाशं नीयमाने घटे यथा ।
घटे नश्यति नाकाशं तद्वज्जीव इहात्मनि ॥ ३८ ॥

ಜೀವನ್ಮುಕ್ತನು ಹೇಗಿರುತ್ತಾನೆಂದರೆ –

ಗಡಿಗೆಯಲ್ಲಿ ಆಕಾಶವಿರುತ್ತದೆ. ಆ ಗಡಿಗೆಯನ್ನು ಇನ್ನೊಂದು ಕಡೆಗೆ ಒಯ್ಯುತ್ತಿರುವಾಗ ಗಡಿಗೆಯಲ್ಲಿದ್ದ ಆಕಾಶವು ಮಹಾಕಾಶದಲ್ಲಿ ಸೇರಿಹೋಗಿರುತ್ತದೆ. ಗಡಿಗೆಯು ಒಡೆದು ಹೋದರೂ ಅದರಲ್ಲಿದ್ದ ಆಕಾಶಕ್ಕೆ ಏನೂ ಆಗುವುದಿಲ್ಲ. ಹಾಗೆ ಜೀವನ್ಮುಕ್ತನ ದೇಹವು ನಾಶಹೊಂದಿದರೆ ಅವನ ಜೀವವು ಪರಮಾತ್ಮನಲ್ಲಿ ಸೇರಿಹೋಗಿರುತ್ತದೆ.

घटाकाशमिवात्मानं विलयं वेत्ति तत्त्वत: ।
स गच्छति निरालम्बं ज्ञानालोक्यं न संशय: ॥ ३९ ॥

ಗಡಿಗೆಯು ಒಡೆದು ಹೋದರೆ ಅದರೊಳಗಿನ ಆಕಾಶವು ಮಹಾಕಾಶದಲ್ಲಿ ಲೀನವಾಗುತ್ತದೆಯಷ್ಟೆ. ವಸ್ತುತಃ ಚಿತ್ತವೆಂಬ ಉಪಾಧಿಯು ಗಡಿಗೆಯಂತೆ ನಾಶಹೊಂದಿದಾಗ ಚಿತ್ತವಿಶಿಷ್ಟವಾದ ಆಕಾಶವು ನಿರಾಲಂಬವಾಗಿ ಆಕಾಶದೊಡನೆ ಸೇರಿಹೋಗುತ್ತದೆ. ಇದನ್ನು ತತ್ತ್ವಜ್ಞಾನಿಯು ಮಾತ್ರ ತಿಳಿಯಬಲ್ಲನು. ಇದರಲ್ಲಿ ಸಂಶಯವಿಲ್ಲ.

तपेद्वर्षसहस्त्राणि चैकपादस्थितो नर: ।
एकस्य ज्ञानयोगस्य कलां नार्हति षोडशीम् ॥ ४० ॥

ಈ ಪ್ರಕಾರವಾದ ಜ್ಞಾನಯೋಗಕ್ಕೆ ಸದೃಶವಾದದ್ದು ಇನ್ನು ಯಾವುದೂ ಇಲ್ಲ.

ಮನುಷ್ಯನು ಒಂಟಿಗಾಲಿನಲ್ಲಿ ನಿಂತು ಸಾವಿರ ವರ್ಷ ತಪಸ್ಸು ಮಾಡಿದರೂ ಆ ತಪಸ್ಸು ಒಂದು ಜ್ಞಾನಯೋಗದ ಹದಿನಾರನೆಯ ಒಂದಂಶವನ್ನೂ ಹೋಲುವುದಿಲ್ಲ.

आलोड्य चतुरो वेदान् धर्मशास्त्राणि सर्वदा ।
यो वै ब्रह्म न जानाति दर्वी पाकरसं यथा ॥ ४१ ॥

ನಾಲ್ಕು ವೇದಗಳನ್ನು ತಲಸ್ಪರ್ಶಿಯಾಗಿ ವಿಚಾರಮಾಡಿದರೂ, ಧರ್ಮಶಾಸ್ತ್ರಗಳನ್ನು ಚೆನ್ನಾಗಿ ಓದಿದರೂ ಮನುಷ್ಯನು ಜ್ಞಾನಯೋಗವಿಲ್ಲದೇ

ಬ್ರಹ್ಮವನ್ನರಿಯಲಾರನು. ಸೌಟು ಅಡುಗೆಯ ರುಚಿಯನ್ನು ಹೇಗೆ ಅರಿಯದೋ ಹಾಗೆ ಕೇವಲ ಶಾಸ್ತ್ರಜ್ಞನು ಬ್ರಹ್ಮವನ್ನು ಅರಿಯಲಾರ.

यथा खरश्चन्दनभारवाहो भारस्य वाहो न तु चन्दनस्य ।
एवं हि शास्त्राणि बहून्यधीत्य सारं न
जानन्खरवद्वहेत्सः ॥ ४२ ॥

ಕತ್ತೆಯು ಶ್ರೀಗಂಧವನ್ನು ತುಂಬಿದ ಹೊರೆಯನ್ನು ಹೊತ್ತುಕೊಂಡು ಹೋದರೂ ಶ್ರೀಗಂಧದ ಸುವಾಸನೆಯನ್ನು ತಿಳಿಯಲಾರದು. ಸುಮ್ಮನೇ ಭಾರವನ್ನು ಹೊರುತ್ತದೆ. ಹಾಗೆಯೇ ನಾನಾ ಶಾಸ್ತ್ರಗಳನ್ನು ಅರಿತ ವಿದ್ವಾಂಸನು ಶಾಸ್ತ್ರಗಳನ್ನು ಕಲಿಯುವ ಶ್ರಮವನ್ನು ಅನುಭವಿಸುತ್ತಾನೆಯೇ ಹೊರತು ಆತ್ಮತತ್ತ್ವವನ್ನು ಅರಿಯದೇ ಹೋಗುತ್ತಾನೆ. ಅವನ ಶ್ರಮವೆಲ್ಲವೂ ಕತ್ತೆಯು ಹೊರೆಯನ್ನು ಹೊತ್ತ ಹಾಗೆ.

अनन्तकर्मशौचं च जपो यज्ञस्तथैव च ।
तीर्थयात्रादिगमनं यावत्तत्त्वं न विन्दति ॥ ४३ ॥

ಆತ್ಮತತ್ವವನ್ನು ತಿಳಿಯುವ ವರೆಗೆ ನಾನಾ ಬಗೆಯ ಶಾಸ್ತ್ರವಿಹಿತ ಕರ್ಮಗಳನ್ನೂ, ಶೌಚ ವಿಧಿಯನ್ನೂ, ಜಪ, ಯಜ್ಞಾದಿಗಳನ್ನೂ ಆಚರಿಸಬೇಕು. ತೀರ್ಥಯಾತ್ರಾದಿಗಳು ಸಹ ಆತ್ಮಜ್ಞಾನವಾಗುವ ವರೆಗೆ ಮಾತ್ರ.

ತಾತ್ಪರ್ಯ: ಆತ್ಮಜ್ಞಾನವಾದ ಮೇಲೆ ಕರ್ಮಾದಿಗಳೆಲ್ಲವೂ ವ್ಯರ್ಥವೆಂದು ಅಭಿಪ್ರಾಯ.

गवामनेकवर्णानां क्षीरस्याप्येकवर्णता ।
क्षीरवत्पश्यते ज्ञानं देहिनां च गवां यथा ॥ ४४ ॥

ಪ್ರಾಣಿಗಳ ದೇಹಗಳು ಬೇರೆ ಬೇರೆ ಆದರೂ ಅವುಗಳಲ್ಲಿರುವ ಆತ್ಮವು ಒಂದೇ ಆಗಿರುತ್ತದೆ. ಘಟಗಳು ಅನೇಕವಾದರೂ ಅವುಗಳಲ್ಲಿರುವ ಘಟತ್ವ ಜಾತಿಯು ಒಂದೇ ಎಂದು ಪೂರ್ವಮೀಮಾಂಸಕರು ಒಪ್ಪಿದ್ದಾರೆ. ಇದಕ್ಕೆ ದೃಷ್ಟಾಂತ –

ನಾನಾ ಬಣ್ಣದ ಹಸುಗಳಾದರೂ ಅವುಗಳ ಹಾಲಿನಲ್ಲಿ ಬಿಳುಪು ಎಂಬ ಒಂದೇ ಬಣ್ಣವಿರುತ್ತದೆ. ಹಾಗೆಯೇ ಜ್ಞಾನಿಯಾದವನು ಬೇರೆ ಬೇರೆ ದೇಹಗಳಲ್ಲಿರುವ ಆತ್ಮನು ಒಬ್ಬನೇ ಎಂದು ತಿಳಿಯುತ್ತಾನೆ.

ಟಿಪ್ಪಣಿ: ಜ್ಞಾನ = ಆತ್ಮ (ಬ್ರಹ್ಮ)

अहं ब्रह्मेति नियते मोक्षहेतुर्महात्मनाम् ।
द्वे पदे बन्धमोक्षाय न ममेति ममेति च ॥ ४५ ॥
ममेति बध्यते जन्तुर्न ममेति विमुच्यते ॥ ४६ ॥

''ಅಹಂ ಬ್ರಹ್ಮ'' ಎಂಬ ಎರಡು ಪದಗಳು ಮೋಕ್ಷಕ್ಕೆ ಕಾರಣವಾದವು ಎಂದು ಮಹಾತ್ಮರು ತಿಳಿದಿದ್ದಾರೆ. ಮಮ – ನನ್ನದು ಎಂದು ಹೇಳತಕ್ಕ ಜೀವಿಯು ಬಂಧಕ್ಕೆ ಒಳಗಾಗುತ್ತಾನೆ. ನ ಮಮ – ನನ್ನದಲ್ಲ ನನ್ನದಲ್ಲ ಎನ್ನತಕ್ಕವನು ಮುಕ್ತನಾಗುತ್ತಾನೆ.

मनसो ह्युन्मनीभावाद्द्वैतं नैवोपलभ्यते ।
यदा यात्युन्मनीभावं तदा तत्परमं पदम् ॥ ४७ ॥

ಮನಸ್ಸನ್ನು ಉನ್ಮನೀಭಾವಗೊಳಿಸಿದಾಗ ಎಂದರೆ ಅಹಂಕಾರವನ್ನು ತ್ಯಜಿಸಿದಾಗ ದ್ವೈತವು ಉಪಲಬ್ಧವಾಗುವುದೇ ಇಲ್ಲ. ಹೀಗೆ ಉನ್ಮನೀಭಾವವಾಗುವುದೇ ಮೋಕ್ಷವೆಂದು ತಿಳಿಯಬೇಕು.

ಟಿಪ್ಪಣಿ : ಮನಸ್ಸಿನಿಂದ ಉದ್ಗತವಾಗುವುದೇ ಉನ್ಮನೀ ಭಾವ. ಅಹಂ ಮಮ ಎಂಬುದು ಮನಸ್ಸಿನ ಸ್ವಭಾವ. ಅಹಂಕಾರ ಮಮಕಾರಗಳನ್ನು ತ್ಯಜಿಸುವುದೇ ಉನ್ಮನೀ ಭಾವ.

हन्यान्मुष्टिभिराकाशं क्षुधार्तः कण्डयेत्तुषम् ।
नाहं ब्रह्मेति जानाति तस्य मुक्तिर्न जायते ॥ ४८ ॥

ಹಸಿವಾದವನು ಮುಷ್ಟಿಗಳಿಂದ ಆಕಾಶವನ್ನು ಗುದ್ದಬಹುದು. ಧಾನ್ಯಾರ್ಥಿಯು ಭತ್ತದ ಹೊಟ್ಟನ್ನು ಕುಟ್ಟಬಹುದು. (ಅವರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ) ಹಾಗೆಯೇ ಮನುಷ್ಯನು ''ಅಹಂ ಬ್ರಹ್ಮ'' ಎಂದು ಎಲ್ಲಿಯ ವರೆಗೆ ತಿಳಿಯುವುದಿಲ್ಲವೋ ಅಲ್ಲಿಯ ವರೆಗೆ ಅವನಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಮುಕ್ತಿಯೂ ದೊರೆಯುವುದಿಲ್ಲ.

ಇಲ್ಲಿಗೆ ಶ್ರೀ ಗೌಡಪಾದಾಚಾರ್ಯ ವಿರಚಿತ ವ್ಯಾಖ್ಯಾನಸಹಿತವಾದ ಉತ್ತರಗೀತೆಯಲ್ಲಿ ಎರಡನೆಯ ಅಧ್ಯಾಯವು.

******

तृतीयोऽध्याय:

ಅಧ್ಯಾಯ ಮೂರು

श्री भगवानुवाच –

अनन्तशास्त्रं बहु वेदितव्यमल्पश्च कालो
बहवश्च विघ्नाः ।
यत्सारभूतं तदुपासितव्यं हंसो यथा
क्षीरमिवाम्बुमिश्रम् ॥ १ ॥

ಯೋಗಿಯಾದವನು ವ್ಯರ್ಥವಾದ ಕ್ರಿಯಾಕಲಾಪಗಳನ್ನು ಪರಿತ್ಯಜಿಸಿ ಶಾಂತಚಿತ್ತನಾಗಿ ಶ್ರೀಹರಿಯನ್ನೇ ಧ್ಯಾನಿಸುತ್ತಾ ಅವನಿಗೆ ಶರಣಾಗಬೇಕೆಂದು ಈ ಮೂರನೆಯ ಅಧ್ಯಾಯದಲ್ಲಿ ಹೇಳಲಾಗುವುದು –

ಶ್ರೀ ಭಗವಾನ್ ಉವಾಚ –

ಈ ಜಗತ್ತಿನಲ್ಲಿ ತಿಳಿಯಬೇಕಾದ ಶಾಸ್ತ್ರಗಳು ಅನಂತವಾಗಿವೆ. ಆಯುಸ್ಸು ಅಲ್ಪಕಾಲವುಳ್ಳದ್ದು. ವಿಘ್ನಗಳು ಹಲವಾರು. ಆದ್ದರಿಂದ ವಿವೇಕಿಯು ಸಾರಭೂತವಾದ ತತ್ತ್ವ ಯಾವುದೆಂಬುದನ್ನು ತಿಳಿದು ಕೃತಕೃತ್ಯನಾಗಬೇಕು. ಜಲಮಿಶ್ರವಾದ ಹಾಲಿನಲ್ಲಿ ಹಾಲನ್ನು ಮಾತ್ರ ಹಂಸ ಪಕ್ಷಿಯು ಸೇವಿಸುವ ಹಾಗೆ ಸಾರಭೂತವಾದ ತತ್ತ್ವವನ್ನು ತಿಳಿಯಲು ಪ್ರಯತ್ನಿಸಬೇಕು.

ವಿವರಣೆ: ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।

ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥

ಸರ್ವಶಾಸ್ತ್ರಗಳನ್ನೂ ಚೆನ್ನಾಗಿ ಪರಿಶೀಲಿಸಿ ಮತ್ತೆ ಮತ್ತೆ ವಿಚಾರ ಮಾಡಿದ ಮೇಲೆ ಇದೊಂದು ವಿಷಯ ನಿಶ್ಚಯವಾಯಿತು. ಏನೆಂದರೆ, ಮನುಷ್ಯನು ಸರ್ವದಾ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತಿರಬೇಕು.

पुराणं भारतं वेद: शास्त्राणि विविधानि च ।
पुत्रदारादिसंसारो योगाभ्यासस्य विघ्नकृत् ॥ २ ॥

ಪುರಾಣ ಭಾರತ ವೇದ ನಾನಾ ಬಗೆಯ ಶಾಸ್ತ್ರಗಳು ಮತ್ತು ಪುತ್ರ ಕಳತ್ರಾದಿ ಸಂಸಾರವು ಯೋಗಾಭ್ಯಾಸಕ್ಕೆ ವಿಘ್ನವನ್ನುಂಟು ಮಾಡುತ್ತವೆ.

इदं ज्ञानमिदं ज्ञेयं यत्सर्वं ज्ञातुमिच्छति ।
अपि वर्षसहस्रायुः शास्त्रान्तं नाधिगच्छति ॥ ३ ॥

ಜ್ಞಾನವೆಂದರೆ ಇದು. ಇದು ತಿಳಿಯಬೇಕಾದದ್ದು. ಈ ರೀತಿಯಾಗಿ ಯಾವನು ತಿಳಿಯಲು ಯತ್ನಿಸುತ್ತಾನೋ ಅವನಿಗೆ ಸಾವಿರ ವರ್ಷ ಆಯುಸ್ಸು ಇದ್ದರೂ ನಾನಾ ವಿಧ ಶಾಸ್ತ್ರಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ.

विज्ञेयोऽक्षरतन्मात्रो जीवितं चापि चञ्चलम् ।
विहाय शास्त्रजालानि यत्सारं तदुपास्यताम् ॥ ४ ॥

ಅಯ್ಯಾ ! ನಾಶರಹಿತವೂ ಸತ್ತಾ ಮಾತ್ರಸ್ವರೂಪನೂ ಆದ ಆತ್ಮನನ್ನು ಸರಿಯಾಗಿ ತಿಳಿದುಕೋ. ಜೀವನವು ಅತ್ಯಂತ ಕ್ಷಣಿಕವಾದದ್ದು. ಆದ್ದರಿಂದ ಶಾಸ್ತ್ರಜಾಲಗಳನ್ನು ಪರಿತ್ಯಜಿಸಿ ಸಾರಭೂತವಾದ ಆತ್ಮತತ್ತ್ವವನ್ನು ತಿಳಿಯಲು ಪ್ರಯತ್ನಿಸು.

ವಿವರಣೆ: ''ಚರಮ ಶ್ವಾಸವೇಲಾಯಾಂ ಯತ್ ಕೃತ್ಯಂ ಸರ್ವದಾ ಕುರು'' ಎಂಬ ನ್ಯಾಯವೊಂದುಂಟು. ಕಡೆಯ ಉಸಿರನ್ನು ಬಿಡುವಾಗ ಏನು ಮಾಡಬೇಕೋ ಅದನ್ನು ಸರ್ವದಾ ಮಾಡುತ್ತಿರು ಎಂದರ್ಥ. ''ಅಂತ ಕಾಲೇ ಚ ಮಾಮೇವಂ ಸ್ಮರನ್ ಮುಕ್ತ್ವಾ ಕಲೇವರಮ್'' ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಸರ್ವದಾ ಹರಿಸ್ಮರಣೆಯನ್ನು ಮಾಡುತ್ತಿರಬೇಕೆಂದು ತಾತ್ಪರ್ಯ.

पृथिव्यां यानि भूतानि जिह्वोपस्थनिमित्तकम् ।
जिह्वोपस्थपरित्यागे पृथिव्यां किं प्रयोजनम् ॥ ५ ॥

ಈ ಜಗತ್ತಿನಲ್ಲಿ ಯಾವ ಯಾವ ಪ್ರಾಣಿಗಳಿವೆಯೋ ಅವೆಲ್ಲವೂ ಜಿಹ್ವೆ ಉಪಸ್ಥಗಳ ನಿಮಿತ್ತವಾಗಿಯೇ ಬದುಕಿರುತ್ತವೆ. ಈ ಜಿಹ್ವೆ ಮತ್ತು ಉಪಸ್ಥಗಳ ಚಾಪಲ್ಯವನ್ನು ತ್ಯಜಿಸಿದ ಮೇಲೆ ಈ ಜಗತ್ತಿನಲ್ಲಿ ಇನ್ನು ಯಾವ ಪ್ರಯೋಜನವಿದೆ ? ''ಜಿತಂ ಸರ್ವಂ ಜಿತೇ ರಸೇ'' ಎಂಬ ನ್ಯಾಯವುಂಟು. ಈ ವಾಕ್ಯದಲ್ಲಿ ರಸವೆಂದರೆ ವಿಷಯಸುಖದ ಅಭಿಲಾಷೆಯೆಂದರ್ಥ.

तीर्थानि तोयपूर्णानि देवान्पाषाणमृन्मयान् ।
योगिनो न प्रपद्यन्त आत्मज्ञानपरायणाः ॥ ६ ॥

ಆತ್ಮಜ್ಞಾನಪರಾಯಣರಾದವರು ತೀರ್ಥಗಳು ಕೇವಲ ನೀರಿನಿಂದ ತುಂಬಿರುತ್ತವೆ ಎಂದು ಭಾವಿಸುತ್ತಾರೆ. ದೇವರೆಲ್ಲರೂ ಕಲ್ಲು ಮಣ್ಣುಗಳು ಎಂದು ತಿಳಿದು ಅವನ್ನು ಪೂಜಿಸುವುದಿಲ್ಲ.

अग्निर्देवो द्विजातीनां मुनीनां हृदि दैवतम् ।
प्रतिमा स्वल्पबुद्धीनां सर्वत्र समदर्शिनाम् ॥ ७ ॥

ಕರ್ಮಕಾಂಡವನ್ನು ನಂಬಿದ ದ್ವಿಜರಿಗೆ ಅಗ್ನಿಯೇ ದೇವತೆ. ಮುನಿಗಳಿಗೆ ಹೃದಯದಲ್ಲಿಯೇ ದೇವನಿರುತ್ತಾನೆ. ಅಲ್ಪಬುದ್ಧಿಯವರಿಗೆ ಪ್ರತಿಮೆಯೇ ದೇವತೆ. ಬ್ರಹ್ಮಜ್ಞಾನಿಗಳಿಗೆ ಸರ್ವವೂ ದೇವತೆಯೇ. ''ಸರ್ವಂ ಖಲ್ವಿದಂ ಬ್ರಹ್ಮ'' ಎಂದು ಶ್ರುತಿವಚನವಿದೆ.

सर्वत्रावस्थितं शान्तं न प्रपश्येज्जनार्दनम् ।
ज्ञानचक्षुर्विहीनत्वादन्धः सूर्यमिवोदितम् ॥ ८ ॥

ಎಲ್ಲೆಲ್ಲಿಯೂ ಪರಿಪೂರ್ಣನಾಗಿರುವ ಶಾಂತನಾದ ಶ್ರೀಮನ್ನಾರಾಯಣನನ್ನು ಅಜ್ಞನು ಕಾಣಲಾರದೇ ಹೋಗಿದ್ದಾನೆ. ಅವನು ಕುರುಡ. ಅವನಿಗೆ ಜ್ಞಾನವೆಂಬ ನೇತ್ರವಿಲ್ಲ. ಉದಯಿಸಿ ಬೆಳಗುತ್ತಿರುವ ಸೂರ್ಯನನ್ನು ಕುರುಡನು ಹೇಗೆ ಕಾಣಲಾರನೋ ಹಾಗೆ ಅಜ್ಞನ ಪರಿಸ್ಥಿತಿಯಾಗಿರುತ್ತದೆ.

यत्र यत्र मनो याति तत्र तत्र परं पदम् ।
तत्र तत्र परं ब्रह्म सर्वत्र समवस्थितम् ॥ ९ ॥

ಜ್ಞಾನಿಯ ಮನಸ್ಸು ಎಲ್ಲಿ ಎಲ್ಲಿಗೆ ಹೋಗಿರುತ್ತದೆಯೋ ಅಲ್ಲಿ ಅಲ್ಲಿ ಪರಬ್ರಹ್ಮವಿರುತ್ತದೆ. ಈ ಪರಬ್ರಹ್ಮವು ಸರ್ವತ್ರ ನೆಲಸಿರುತ್ತದೆ.

दृश्यन्ते दृशिरूपाणि गगनं भाति निर्मलम् ।
अहमित्यक्षरं ब्रह्म परमं विष्णुमव्ययम् ॥ १० ॥

ಅಪಕ್ಷಯವಿಲ್ಲದ, ನಾಶರಹಿತವಾದ ಬ್ರಹ್ಮವೆಂಬ ಪರಮೋತ್ಕೃಷ್ಟನಾದ ವಿಷ್ಣುವೇ ನಾನು ಎಂದು ತಿಳಿದವನ ಜ್ಞಾನಕ್ಕೆ ನಾಮರೂಪಾತ್ಮಕವಾದ ಜಗತ್ತು ಗೋಚರಿಸುತ್ತದೆ. ಆಕಾಶವು ನಿರ್ಮಲವಾಗಿರುವಂತೆ ಕಾಣುತ್ತದೆ.

ವಿವರಣೆ: ಆರುರುಕ್ಷುವಾದ ಯೋಗಿಗೆ ಮಾತ್ರ ಜಗತ್ತು ನಾಮರೂಪಾತ್ಮಕವಾಗಿದೆಯೆಂದು ತಿಳಿಯುತ್ತದೆ. ಆರೂಢನಾದ ಯೋಗಿಗೆ ಆದಾವುದೂ ಗೋಚರಿಸುವುದಿಲ್ಲ. ಸರ್ವವೂ ಬ್ರಹ್ಮವೆಂದು ಮಾತ್ರ ಆತನು ತಿಳಿದಿರುತ್ತಾನೆ.

दृश्यते चेत्खगाकारं खगाकारं विचिन्तयेत् ।
सकलं निष्कलं सूक्ष्मं मोक्षद्वारेण निर्गतम् ॥ ११ ॥

ಯೋಗಿಯು ಧ್ಯಾನಿಸುವಾಗ ಪರಬ್ರಹ್ಮವು ಹಂಸಪಕ್ಷಿಯ ರೂಪದಲ್ಲಿ ಕಾಣಿಸಿದರೆ ಆಗ ಆ ಪಕ್ಷಿಯೇ ತೇಜೋಮಯವಾದ ಅಖಂಡವೂ, ಸೂಕ್ಷ್ಮವೂ ಸಕಲವೂ ಆಗಿದೆಯೆಂದು ಮೋಕ್ಷದ ದ್ವಾರದಿಂದ ಪಕ್ಷಿಯ ಆಕಾರದಲ್ಲಿ ಹೊರಬಂದಿದೆಯೆಂದು ತಿಳಿದು ಧ್ಯಾನಿಸುತ್ತಿರಬೇಕು.

ಟಿಪ್ಪಣಿ : ಮೋಕ್ಷದ ದ್ವಾರದಿಂದ ಹೊರಬಂದಿದೆಯೆಂದರೆ – 'ಯೋಗಿಯು ಪೂರ್ಣಸಿದ್ಧಿಯನ್ನು ಪಡೆದಿಲ್ಲವೆಂದೂ, ಸಿದ್ಧಿಯು ಸಮೀಪಿಸಿದೆಯೆಂದೂ ಅಭಿಪ್ರಾಯ. ಆಗ ಬ್ರಹ್ಮವು ನಿಷ್ಕಲವಾದರೂ ಹಂಸರೂಪದಲ್ಲಿ ಕಾಣಿಸಿಕೊಳ್ಳುತ್ತದೆ.'

अपवर्गस्य निर्वाणं परमं विष्णुमव्ययम् ।
सर्वज्योतिर्निराकारं सर्वभूतगुणान्वितम् ॥ १२ ॥
सर्वत्र परमात्मानं ब्रह्मात्मा परमव्ययम् ॥ १३ ॥

ಮೋಕ್ಷಸುಖಾತ್ಮಕವೂ, ಪರಮೋತ್ಕೃಷ್ಟವೂ, ಸರ್ವವ್ಯಾಪಕವೂ, ಅವ್ಯಯವೂ, ಕೇವಲ ಜ್ಯೋತಿಃಸ್ವರೂಪವೂ ಆಕಾರರಹಿತವೂ, ಸಮಸ್ತ ಭೂತಗಳ ಹೃದಯದಲ್ಲಿ ಇರತಕ್ಕದ್ದೂ (ಸರ್ವಾಂತರ್ಯಾಮಿ) ಸರ್ವತ್ರ ಆತ್ಮಸ್ವರೂಪದಲ್ಲಿ ಇರತಕ್ಕ, ನಾಶರಹಿತವೂ ಆದ ಬ್ರಹ್ಮವೇ ಹಂಸಾಕಾರದಿಂದ ಕಾಣಿಸಿಕೊಳ್ಳುತ್ತಿದೆಯೆಂದು ತಿಳಿಯಬೇಕು.

अहं ब्रह्मेति यत्सर्वं विजानाति नरः सदा ।
हन्यात्स्वयमिमान्कामान्सर्वाशी सर्वविक्रयी ।
सर्वं निषिद्धं कृत्वापि कर्मभिर्न स बध्यते ॥ १४ ॥

ಯಾವ ಮನುಷ್ಯನು ಸರ್ವವನ್ನೂ ಬ್ರಹ್ಮವೆಂದು ತಿಳಿದು ಆ ಬ್ರಹ್ಮವೇ ನಾನು ಎಂಬ ಭಾವದಿಂದ ''ಅಹಂ ಬ್ರಹ್ಮ'' ಎಂದು ನಿಶ್ಚಯಿಸಿಕೊಳ್ಳುವನೋ ಅವನು ಎಲ್ಲ ಕಾಮನೆಗಳನ್ನೂ ದಾಟಿದವನಾಗಿ ಎಲ್ಲ ಪಾಪಗಳನ್ನೂ ನಾಶಪಡಿಸಿಕೊಳ್ಳುತ್ತಾನೆ. ಅವನು ಸರ್ವವನ್ನೂ ತಿನ್ನುತ್ತಿರಲಿ, ಸರ್ವವನ್ನೂ ವಿಕ್ರಯಿಸುತ್ತಿರಲಿ, ನಿಷಿದ್ಧವಾದ ಸರ್ವವನ್ನೂ ಮಾಡುತ್ತಿರಲಿ ಅಂತಹ ಪಾಪಕರ್ಮದಿಂದಲೂ ಬದ್ಧನಾಗುವುದಿಲ್ಲ. ಅವನು ಏನು ಮಾಡಿದರೂ ಅವನಿಗೆ ದೋಷವು ಅಂಟುವುದಿಲ್ಲ.

निमिषं निमिषार्धं वा शीताशीतनिवारणम् ।
अचला केशवे भक्तिर्विभवैः किं प्रयोजनम् ॥ १५ ॥

ಚಳಿ, ಸೆಕೆ, ಸುಖ-ದುಃಖ ಇವುಗಳ ಪರಿವೆ ಇಲ್ಲದೇ ಒಂದು ನಿಮಿಷ ಅಥವಾ ಅರ್ಧ ನಿಮಿಷ ಕಾಲ ಕೇಶವನಲ್ಲಿ ಭಕ್ತಿಯನ್ನಿಟ್ಟು ಧ್ಯಾನಿಸಿದರೆ ಸಾಕು. ಐಶ್ವರ್ಯದಿಂದ ಒದಗುವ ಸುಖಗಳಿಂದ ಯಾವ ಪ್ರಯೋಜನವೂ ಇಲ್ಲ.

भिक्षान्नं देहरक्षार्थं वस्त्रं शीतनिवारणम् ।
अश्मानं च हिरण्यं च शाकं शाल्योदनं तथा ।
समानं चिन्तयेद्योगी यदि चिन्त्यमपेक्षते ॥ १६ ॥
गतवस्तुन्यशोचित्वे पुनर्जन्म न विद्यते ॥ १७ ॥

ಯೋಗಿಯಾದವನು ಮೋಕ್ಷವೇ ಧ್ಯೇಯವೆಂದು ತಿಳಿಯುವುದಾದರೆ ದೇಹರಕ್ಷಣೆಗಾಗಿ ಭಿಕ್ಷಾನ್ನವು ಸಾಕೆಂದು ತಿಳಿಯುತ್ತಾನೆ. ಶೀತ ನಿವಾರಣೆಗಾಗಿ ಮಾತ್ರ ಬಟ್ಟೆಯು ಬೇಕಾಗಬಹುದು. ಆತನು ಚಿನ್ನವನ್ನು ಕಲ್ಲೆಂದೂ ಗಡ್ಡೆ-ಗೆಣಸು ಮುಂತಾದ ಶಾಕವೇ ಮಿಷ್ಟಾನ್ನವೆಂದೂ ತಿಳಿಯುತ್ತಾನೆ.

ಹಿಂದೆ ನಡೆದುಹೋದ ವಿಷಯಕ್ಕೆ ಯಾವನು ಶೋಕಿಸುವುದಿಲ್ಲವೋ ಅಂತಹ ಯೋಗಿಗೆ ಪುನರ್ಜನ್ಮವಿಲ್ಲ.

आत्मयोगमवोचद्यो भक्तियोगशिरोमणिः ।
तं वन्दे परमानन्दं नन्दनन्दनमीश्वरम् ॥ १८ ॥

ಯಾರು ಆತ್ಮಯೋಗವನ್ನು – ಮೋಕ್ಷಹೊಂದುವ ಪ್ರಕಾರವನ್ನು ಉಪದೇಶಿಸಿದನೋ ಪರಮಾನಂದ ಸ್ವರೂಪನೂ ನಂದಗೋಪನ ಪುತ್ರನೂ ಭಕ್ತಿಯೋಗಕ್ಕೆ ಪರಮಲಕ್ಷ್ಯನೂ ಆದ ಆ ಪರಮಾತ್ಮನನ್ನು ನಮಸ್ಕರಿಸುತ್ತೇನೆ.

ಇತಿ ಶ್ರೀ ಗೌಡಪಾದರ ವ್ಯಾಖ್ಯಾನ ಸಹಿತವಾದ ಉತ್ತರಗೀತೆಯ ಮೂರನೆಯ ಅಧ್ಯಾಯ.

******



ಡಾ। ಟಿ. ಮಾಧವ ಪೈ ದಂಪತಿಗಳೊಂದಿಗೆ ಪಾಂಡುರಂಗ ಶೆಣೈ ದಂಪತಿಗಳು

ನಮ್ಮ ಸಂಸ್ಥೆಯಿಂದ ಪ್ರಕಾಶಿತವಾದ ಇತರ ಪುಸ್ತಕಗಳು